www.janavaadi.in

# ಜನವಾದಿ

ರಾಯಚೂರು
ಕಲಬುರಗಿ
ಯಾದಗಿರಿ
ಕೊಪ್ಪಳ
ಬಳ್ಳಾರಿ
ಬೀದರ್

ಸಂಪಾದಕ : ಬಸವರಾಜ ಹೆಚ್
Editor : Basavaraj H

ಜನರ ಅಂತರಂಗದ ಧ್ವನಿ
ಕನ್ನಡ ದಿನಪತ್ರಿಕೆ

JANAVAADI
Kannada Daily News Paper

ಸಂಪುಟ : 12 ಸಂಚಿಕೆ : 194 ಪುಟ : 4 ರಾಯಚೂರು ರವಿವಾರ 22-02-2026 RNI NO.KARKAN/2012/56428 ಮೊಬೈಲ್: 9448300139,9449711232. e-mail : janavaadi@gmail.com ಬೆಲೆ : 2 ರೂ.
VOLUME : 12 ISSUE : 194 PAGES : 4 RAICHUR SUNDAY 22-02-2026 RNI NO.KARKAN/2012/56428 MOBILE:9448300139,9449711232. E-MAIL:janavaadi@gmail.com PRICE : 2 RS.

## ಫೆ.24ರಂದು ಭೋವಿ ಅಭಿವೃದ್ಧಿ ನಿಗಮದ ಪ್ರಗತಿ ಪರಿಶೀಲನಾ ಸಭೆ

**ಜನವಾದಿ ವಾರ್ತೆ**

ರಾಯಚೂರು ಫೆ 21 – ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ರಾಮಪ್ಪ ಅವರ ಅಧ್ಯಕ್ಷತೆಯಲ್ಲಿ ಫೆ.24ರ ಬೆಳಿಗ್ಗೆ 11 ಗಂಟೆಗೆ ನಗರದ ಪಂಡಿತ ಸಿದ್ದರಾಮ ಜಂಬಲದಿನ್ನಿ ರಂಗಮಂದಿರದಲ್ಲಿ ಜಿಲ್ಲಾಧಿಕಾರಿಗಳ ಸಮನ್ವಯದೊಂದಿಗೆ ನಿಗಮದ ಯೋಜನೆಗಳ ಕುರಿತು ಪ್ರಗತಿ ಪರಿಶೀಲನಾ ಸಭೆಯನ್ನು ಹಮ್ಮಿಕೊಳ್ಳಲಾಗಿದ್ದು, ಭೋವಿ ಸಮಾಜದ ಎಲ್ಲಾ ಮುಖಂಡರು ಮತ್ತು ಸಾರ್ವಜನಿಕರು ಸಭೆಗೆ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಕರ್ನಾಟಕ ಬೋವಿ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕರು ತಿಳಿಸಿದ್ದಾರೆ.

ಅಂದು ಸಭೆಗೂ ಮುನ್ನ ಬೆಳಿಗ್ಗೆ 10.30 ಗಂಟೆಗೆ ಪಕ್ಷದ ಕಚೇರಿಗೆ ಭೇಟಿ ನೀಡಲಿದ್ದಾರೆ. ನಂತರ ಭೋವಿ ಸಮುದಾಯದ ಮುಖಂಡರುಗಳೊಂದಿಗೆ ಸಭೆಯನ್ನು ಏರ್ಪಡಿಸಲಾಗಿದೆ.

ಸಂಜೆ 4 ಗಂಟೆಗೆ ರಾಮನಗರ ಕ್ಯಾಂಪ್ ಹಾಗೂ ಪಂಚಮುಖಿ ಗಾಣದಾಳ ಗ್ರಾಮದಲ್ಲಿನ ಭೋವಿ ಕಾಲೋನಿಗಳಲ್ಲಿ ಭೇಟಿ ನೀಡಿ ಸಮಾಜದ ಕುಂದುಕೊರತೆಗಳ ಹಾಗೂ ನಿಗಮದ ಸೌಲಭ್ಯಗಳ ಬಗ್ಗೆ ಜನರೊಂದಿಗೆ ಸಂವಾದ ನಡೆಸಲಿದ್ದಾರೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.




ರೋಜಾ ಸಂಖ್ಯೆ
03
ಸೆಹರಿ ಸಮಯ
ಬೆಳಗ್ಗೆ 05:18
ಇಫ್ತಾರ್ ಸಮಯ
ಸಂಜೆ 06:26

### ರಾಯಚೂರು ಪೇಟೆ ದರ

| | |
|---|---|
| **ಸಣ್ಣ ಭತ್ತ(ಸೋನಾ)** | |
| ಕನಿಷ್ಠ | 2256 |
| ಗರಿಷ್ಠ | 2836 |
| **ಒಣಕಡಲೆ** | |
| ಕನಿಷ್ಠ | 4652 |
| ಗರಿಷ್ಠ | 5409 |
| **ಕೆಂಪು ತೊಗರಿ** | |
| ಕನಿಷ್ಠ | 6269 |
| ಗರಿಷ್ಠ | 8329 |
| **ಶೇಂಗಾ (ಗುಂಗ್ರು)** | |
| ಕನಿಷ್ಠ | 6111 |
| ಗರಿಷ್ಠ | 9770 |
| **ಸೂರ್ಯಕಾಂತಿ** | |
| ಕನಿಷ್ಠ | – |
| ಗರಿಷ್ಠ | – |
| **ಈರುಳ್ಳಿ** | |
| ಕನಿಷ್ಠ | 790 |
| ಗರಿಷ್ಠ | 1430 |

### ರಾಯಚೂರು ಜಿಲ್ಲೆ

ಇಂದಿನ ಹವಾಮಾನ ಮುನ್ಸೂಚನೆ



ಗರಿಷ್ಠ : 33 ಸೆಲ್ಸಿಯಸ್
ಕನಿಷ್ಠ : 23 ಸೆಲ್ಸಿಯಸ್

## ಫೆ.26ರಿಂದ ಫೆ.28ರವರೆಗೆ ರಸ್ತೆ ಸಂಚಾರ ಸಮೀಕ್ಷೆ

**ಜನವಾದಿ ವಾರ್ತೆ**

ರಾಯಚೂರು ಫೆ 21 – ಲೋಕೋಪಯೋಗಿ ಇಲಾಖೆಯಿಂದ ಪ್ರತಿ ವರ್ಷಕ್ಕೊಮ್ಮೆ ಎರಡು ದಿನ ಮತ್ತು ಐದು ವರ್ಷಗಳಿಗೊಮ್ಮೆ ಏಳು ದಿನಗಳ ರಾಜ್ಯ ಹೆದ್ದಾರಿಗಳು, ಜಿಲ್ಲಾ ಮುಖ್ಯ ರಸ್ತೆಗಳ ಮೇಲೆ ವಾಹನ ಸಂಚಾರ ಸಮೀಕ್ಷೆಯ ಕಾರ್ಯವನ್ನು ಕೈಗೊಳ್ಳಲಾಗುತ್ತದೆ. ಈ ಸಮೀಕ್ಷೆಯಿಂದ ಸಂಗ್ರಹಿಸಿದ ಮಾಹಿತಿಯಿಂದ ಸರ್ಕಾರಕ್ಕೆ ರಸ್ತೆಗಳ ಸಂಚಾರ ಸಾಂದ್ರತೆ ಸಂಚಾರ ತೀವ್ರತೆ ಕಂಡು ಹಿಡಿಯುವುದಕ್ಕೆ ರಸ್ತೆಗಳ ಅಗಲಳತೆ ನಿರ್ಧರಿಸಲು ರಸ್ತೆಗಳನ್ನು ಮೇಲ್ದರ್ಜೆಗೇರಿಸಲು ರಸ್ತೆಗಳ ಸ್ಥಿತಿಗತಿ ಸುಧಾರಿಸಲು ಅನುಕೂಲವಾಗುತ್ತದೆ.

ಪ್ರಸ್ತುತ ವರ್ಷದಲ್ಲಿ ಫೆ.26ರ ಬೆಳಿಗ್ಗೆ 6 ಗಂಟೆಯಿಂದ ಫೆ.28ರ ಬೆಳಿಗ್ಗೆ 6 ಗಂಟೆಯವರೆಗೆ ಒಟ್ಟು ಎರಡು ದಿನಗಳ ರಸ್ತೆ ಸಂಚಾರ ಸಮೀಕ್ಷೆ ಕಾರ್ಯವನ್ನು ರಾಜ್ಯ ಹೆದ್ದಾರಿ ಹಾಗೂ ಜಿಲ್ಲಾ ಮುಖ್ಯ ರಸ್ತೆಗಳ ಮೇಲೆ ಸ್ಥಾಪಿಸಲಾಗುವ ಕ್ಯಾಮರ ಸಮೇತ ಸಮೀಕ್ಷಾ ಕೇಂದ್ರಗಳಲ್ಲಿ ಕೈಗೊಳ್ಳಲಾಗುತ್ತದೆ.

ಲೋಕೋಪಯೋಗಿ ಇಲಾಖೆಯಿಂದ ರಾಜ್ಯ ಹೆದ್ದಾರಿ ಹಾಗೂ ಜಿಲ್ಲಾ ಮುಖ್ಯ ರಸ್ತೆಗಳ ಮೇಲೆ ರಸ್ತೆ ಸಂಚಾರ ಸಮೀಕ್ಷೆ ಕೈಗೊಳ್ಳಲಾಗುತ್ತದೆ. ಇದಕ್ಕಾಗಿ ರಸ್ತೆಗಳ ಮೇಲೆ ಕ್ಯಾಮರ ಸಮೇತ ಸಮೀಕ್ಷಾ ಕೇಂದ್ರಗಳನ್ನು ಸ್ಥಾಪಿಸಲಾಗುತ್ತದೆ. ಸಮೀಕ್ಷಾ ಕೇಂದ್ರಗಳಿದ್ದಲ್ಲಿ ವಾಹನ ರಸ್ತೆ ಸಂಚಾರ ಸಮೀಕ್ಷೆ ಕೇಂದ್ರವಿದೆ, ತಮ್ಮ ವಾಹನಗಳನ್ನು ನಿಧಾನವಾಗಿ ಚಲಿಸಿ ಎಂದು ಸೂಚನಾ ಫಲಕಗಳನ್ನು ಅಳವಡಿಸಿರುತ್ತಾರೆ. ಎಲ್ಲಾ ವಾಹನ ಚಾಲಕರು ತಮ್ಮ ವಾಹನವನ್ನು ನಿಧಾನವಾಗಿ ಸಾಗಿಸಿಕೊಂಡು ಮುಂದೆ ಸಾಗಿಸಬೇಕು ಎಂದು ಲೋಕೋಪಯೋಗಿ ಇಲಾಖೆಯ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಪಂಚ ಗ್ಯಾರಂಟಿಯಿಂದ ಅಭಿವೃದ್ಧಿ ಆಗಿದೆಯೇ?;

# ತಜ್ಞರಿಂದ ಸಮೀಕ್ಷೆಗೆ ವಿಧಾನಪರಿಷತ್ ಸದಸ್ಯ ವಿಶ್ವನಾಥ್ ಒತ್ತಾಯ

ಮೈಸೂರು ಫೆ 21– "ಪಂಚ ಗ್ಯಾರಂಟಿಗಳನ್ನು ನೀಡಿದ ನಂತರ ರಾಜ್ಯದಲ್ಲಿ ಅಭಿವೃದ್ಧಿ ಆಗಿದೆಯೋ ಇಲ್ಲವೋ ಎಂಬ ಬಗ್ಗೆ ಸಮೀಕ್ಷೆ ನಡೆಸಲು ತಜ್ಞರ ಸಮಿತಿ ರಚಿಸಬೇಕು" ಎಂದು ವಿಧಾನಪರಿಷತ್ ಸದಸ್ಯ ಹೆಚ್. ವಿಶ್ವನಾಥ್ ರಾಜ್ಯ ಸರ್ಕಾರವನ್ನು ಒತ್ತಾಯಿಸಿದರು.



ಶನಿವಾರ ಸುದ್ದಿಗೋಷ್ಠಿ ನಡೆಸಿದ ಹೆಚ್. ವಿಶ್ವನಾಥ್ ಅವರು, "ಪಂಚ ಗ್ಯಾರಂಟಿಗಳು ಯಾವ ರೀತಿ ಅಭಿವೃದ್ಧಿಯಾಗಿದೆ ಎಂಬುದನ್ನು ಸರ್ಕಾರ ಹೇಳಲಿ" ಎಂದು ಒತ್ತಾಯಿಸಿದ ಅವರು "ನಿರ್ದಿಷ್ಟ ಮಾನದಂಡವನ್ನೇ ಇಟ್ಟುಕೊಳ್ಳದೇ ಎಲ್ಲರಿಗೂ ಗ್ಯಾರಂಟಿಗಳನ್ನು ನೀಡಿರುವುದರಿಂದಾಗಿ ಆರ್ಥಿಕ ಶಿಸ್ತೇ ಇಲ್ಲದಂತಾಗಿದೆ. ಜನರ ತೆರಿಗೆ ಹಣವನ್ನೆಲ್ಲ ಉಚಿತ ಕೊಡುಗೆಗಳಿಗೆ ಬಳಸುತ್ತಿರುವುದರಿಂದಾಗಿ ಅಭಿವೃದ್ಧಿಯೇ ಇಲ್ಲದಂತಾಗಿದೆ. ಸಮರ್ಪಕ ಆಡಳಿತವೇ ಇಲ್ಲದೇ ರಾಜ್ಯ ಹಾಳಾಗಿದೆ. ಈ ಅನಾಹುತಕ್ಕೆಲ್ಲ ಮುಖ್ಯಮಂತ್ರಿ ಸಿದ್ದರಾಮಯ್ಯನವರೇ ಕಾರಣ" ಎಂದು ದೂರಿದರು.

"ಉಚಿತ ಕೊಡುಗೆಗಳನ್ನು ಸರ್ಕಾರದ ಹಣದಲ್ಲಿ ಕೊಡುತ್ತಿರುವುದು ಸರಿಯಲ್ಲ. ಅದರ ಬದಲಿಗೆ ಜನರನ್ನು ಸಬಲೀಕರಣ ಮಾಡಿ ಎಂದು ಸುಪ್ರೀಂ ಕೋರ್ಟ್ ಇತ್ತೀಚೆಗೆ ಹೇಳಿದೆ. ವೃದ್ಧಾಪ್ಯ ವೇತನ, ಅಂಗವಿಕಲರ ವೇತನಕ್ಕೆ ಮಾನದಂಡವಿದೆ. ಆದರೆ, ಗ್ಯಾರಂಟಿಗೆ ಏನಿದೆ? ಸಿದ್ದರಾಮಯ್ಯ ಕೊಟ್ಟರು ಎಂದು ಪ್ರಚಾರ ಪಡೆಯುವ ಹುಚ್ಚೇ?" ಎಂದು ಪ್ರಶ್ನಿಸಿದರು.

ರಾಜ್ಯದ ಮೇಲೆ ಸಾಲದ ಹೊರೆ: "ರಾಜ್ಯಕ್ಕೆ ಈಗ 7.50 ಲಕ್ಷ ಕೋಟಿ ಸಾಲ ಇದೆ. ಅದರಲ್ಲಿ 5 ಲಕ್ಷ ಕೋಟಿ ಸಾಲ ಮಾಡಿರುವವರು ಸಿದ್ದರಾಮಯ್ಯ. ಅವರಿಗಿಂತಲೂ ಉತ್ತಮ ಹಣಕಾಸು ಸಚಿವರು ನಮ್ಮಲ್ಲಿ ಆಗಿ ಹೋಗಿದ್ದಾರೆ. ಅವರನ್ನೆಲ್ಲ ಇವರು ಯಾವ ರೀತಿಯಲ್ಲಿ ಮೀರಿಸಿದ್ದಾರೆ? ಸಾಲ ಮಾಡಿ ಉಚಿತವಾಗಿ ಕೊಡುವುದು ಎಷ್ಟು ಸರಿ? ಇದೇನಾ ಸಿದ್ದರಾಮಯ್ಯ ಅವರ ಆರ್ಥಿಕ ತಜ್ಞತೆ? ಎಂದು ವಾಗ್ದಾಳಿ ನಡೆಸಿದರು. 7 ಲಕ್ಷ ಕೋಟಿ ಸಾಲ ಇಟ್ಟುಕೊಂಡು 4 ಲಕ್ಷ ಕೋಟಿ ಬಜೆಟ್ ಕೊಡುವುದು ಯಾವ ಸೀಮೆಯ ಬಜೆಟ್" ಎಂದು ಪ್ರಶ್ನಿಸಿದರು.

"ಜನರಿಗೆ ಮದ್ಯ ಕುಡಿಸಿ ಆ ಪಾಪದ ಹಣ 45 ಸಾವಿರ ಕೋಟಿಯಲ್ಲಿ ಉಚಿತ ಕೊಡುಗೆ ಕೊಡುತ್ತಿದ್ದೀರಿ. ಪತಿಗೆ ಹೆಂಡ ಕುಡಿಸುವುದು, ಅದರಲ್ಲಿ ಬರುವ ಹಣವನ್ನೇ ಪತ್ನಿಗೆ ಕೊಡುವುದು ನಾಚಿಕೆಗೇಡಲ್ಲವೇ? ಎಂದು ಕೇಳಿದರು. ಇದರ ಬದಲಿಗೆ ಶಿಕ್ಷಣ ಹಾಗೂ ಆರೋಗ್ಯವನ್ನು ಉಚಿತವಾಗಿ ಕೊಡಿ" ಎಂದು ಹೇಳಿದರು.

**ಇತಿಹಾಸವನ್ನು ಓದಲಿ:** "ಸಿದ್ದರಾಮಯ್ಯನವರೇ, ರಾಜ್ಯದ ಚರಿತ್ರೆ ಓದಿಕೊಳ್ಳಿ. ನಾನೇ ನಾನೇ ಎಂಬ ದುರಹಂಕಾರ ಬಿಡಿ. ಕಾಂಗ್ರೆಸ್ ಸರ್ಕಾರ ಹಿಂದೆಂದೂ ಈ ರೀತಿ ಮಾಡಿರಲಿಲ್ಲ. ಜನರ ಸಬಲೀಕರಣಕ್ಕೆ ಪೂರಕವಾದ ಕಾರ್ಯಕ್ರಮಗಳನ್ನು ಕೊಡುತ್ತಿತ್ತು. ನಿಮ್ಮನ್ನು ಕಾಂಗ್ರೆಸ್‌ಗೆ ಕರೆದುಕೊಂಡು ಬಂದಿದ್ದಕ್ಕೆ ಪಶ್ಚಾತ್ತಾಪ ಆಗುತ್ತಿದೆ. ಹೀಗಾಗಿ, ಗಾಂಧೀಜಿ ಪ್ರತಿಮೆಯ ಬಳಿ ಪಶ್ಚಾತ್ತಾಪ ಸಭೆ ಮಾಡೋಣ

☛4

## ಟ್ರಂಪ್ ಸುಂಕ ರದ್ದು ಮಾಡಿದ ಅಮೆರಿಕದ ಸುಪ್ರೀಂ ಕೋರ್ಟ್ ಆದೇಶಕ್ಕೆ ರಫ್ತುದಾರರಿಂದ ಬಹುಪರಾಕ್

ನವದೆಹಲಿ ಫೆ 21– ಅಧ್ಯಕ್ಷ ಡೊನಾಲ್ಡ್ ಟ್ರಂಪ್ ವಿಧಿಸಿದ್ದ ಸುಂಕಗಳನ್ನು ರದ್ದುಗೊಳಿಸಿರುವ ಅಮೆರಿಕದ ಸುಪ್ರೀಂ ಕೋರ್ಟ್ ತೀರ್ಪಿಗೆ ಭಾರತೀಯ ರಫ್ತುದಾರರು ಸಂತಸ ವ್ಯಕ್ತಪಡಿಸಿದ್ದಾರೆ. ಇದರಿಂದ, ರಫ್ತುದಾರರಿಗೆ ದೊಡ್ಡ ಲಾಭ ತರಲಿದೆ ಎಂದು ಹೇಳಿದ್ದಾರೆ.

ಈ ತೀರ್ಪಿನ ನಂತರ, ಅಮೆರಿಕ ಮತ್ತು ಭಾರತದ ನಡುವೆ ಮತ್ತಷ್ಟು ಉತ್ತಮ ವಹಿವಾಟು ನಡೆಯಲಿದೆ. ಈಗಲೂ ಚಾಲ್ತಿಯಲ್ಲಿರುವ ಶೇಕಡಾ 25 ರಷ್ಟು ಪರಸ್ಪರ ಸುಂಕಗಳನ್ನು (reciprocal tariffs) ಅನ್ನು ತೆಗೆದುಹಾಕಬೇಕು. ಇದು ಶೇಕಡಾ 55 ರಷ್ಟು ರಫ್ತುಗಳಿಗೆ ನೆರವಾಗಲಿದೆ ಎಂದು ಥಿಂಕ್ ಟ್ಯಾಂಕ್ ಗ್ಲೋಬಲ್ ಟ್ರೇಡ್ ರಿಸರ್ಚ್ ಇನಿಶಿಯೇಟಿವ್ (ಜಿಟಿಆರ್‌ಐ) ಹೇಳಿದೆ.

ಸುಪ್ರೀಂ ಕೋರ್ಟ್‌ನ ಈ ತೀರ್ಪು ಎರಡು ದೇಶಗಳ ನಡುವಿನ ದ್ವಿಪಕ್ಷೀಯ ವ್ಯಾಪಾರದಲ್ಲಿ ಹೊಸ ಅಲೆ ಎಬ್ಬಿಸಲಿದೆ ಎಂದು ಭಾರತೀಯ ರಫ್ತು ಸಂಸ್ಥೆಗಳ ಒಕ್ಕೂಟದ (ಎಫ್‌ಐಇಒ) ಅಧ್ಯಕ್ಷ ಎಸ್‌ಸಿ ರಾಲ್ಹನ್ ಹೇಳಿದ್ದಾರೆ.

ಸೆಕ್ಷನ್ 232 ಸುಂಕ ಈಗಲೂ ಜಾರಿ: ಟ್ರಂಪ್ ಹಾಕಿದ್ದ ಹೆಚ್ಚುವರಿ ಸುಂಕಗಳನ್ನು ಸುಪ್ರೀಂ ಕೋರ್ಟ್ ರದ್ದು ಮಾಡಿದ್ದರೂ, ಉಕ್ಕು, ಅಲ್ಯೂಮಿನಿಯಂ ಮತ್ತು ಕೆಲ ಆಟೋ ಮೊಬೈಲ್ ವಸ್ತುಗಳ ಮೇಲಿನ ಸೆಕ್ಷನ್ 232ರ ಪ್ರಕಾರದ ದುಬಾರಿ ಸುಂಕ ಮುಂದುವರಿಯಲಿವೆ. ಇದು ಕೂಡ ತಗ್ಗಿಸಿದರೆ ಭಾರತೀಯ ರಫ್ತುದಾರರಿಗೆ ಹೆಚ್ಚಿನ ಲಾಭವಾಗಲಿದೆ ಎಂದು ಅವರು ತಿಳಿಸಿದ್ದಾರೆ.

"ಹೆಚ್ಚುವರಿ ಸುಂಕ ರದ್ದಾದ ಕಾರಣ, ಪಾವತಿಸಿದ ಸುಂಕದ ಮೊತ್ತವನ್ನು ಮರುಪಾವತಿ ಮಾಡಲು ಕೋರಬಹುದು. ಈ ನಿರ್ಧಾರವು ಎರಡು ರಾಷ್ಟ್ರಗಳ ನಡುವೆ ಸ್ಥಿರ ಮತ್ತು ರಚನಾತ್ಮಕ ವ್ಯಾಪಾರಕ್ಕೆ ಅವಕಾಶ ನೀಡಲಿದೆ" ಎಂದು ರಾಲ್ಹನ್ ಅವರು ಅಭಿಪ್ರಾಯಪಟ್ಟಿದ್ದಾರೆ.

### ಪರೀಕ್ಷೆ ಸಿದ್ಧತೆಯ ಪೂರ್ವಭಾವಿ ಸಭೆ

## ಪಿಯು ಪರೀಕ್ಷೆಯು ವ್ಯವಸ್ಥಿತ, ಪಾರದರ್ಶಕವಾಗಿ ನಡೆಯಲಿ: ಅಪರ ಜಿಲ್ಲಾಧಿಕಾರಿ ಶಿವಾನಂದ

**ಜನವಾದಿ ವಾರ್ತೆ**

ರಾಯಚೂರು ಫೆ 21 – ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಗಳು ಫೆ.28 ರಿಂದ ಆರಂಭವಾಗಿ ಮಾರ್ಚ 17ರವರೆಗೆ ನಡೆಯಲಿದ್ದು, ಪರೀಕ್ಷೆಯನ್ನು ವ್ಯವಸ್ಥಿತವಾಗಿ ಹಾಗೂ ಪಾರದರ್ಶಕವಾಗಿ ನಡೆಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ಅಪರ ಜಿಲ್ಲಾಧಿಕಾರಿ ಶಿವಾನಂದ ಅವರು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.



ಫೆ.21ರ ಶನಿವಾರ ದಂದು ನಗರದ ನೂತನ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆ ಸಿದ್ಧತೆ ಕುರಿತು ನಡೆದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಗಳನ್ನು ಯಾವುದೇ ರೀತಿಯ ಗೊಂದಲಕ್ಕೆ ಅವಕಾಶವಿರದಂತೆ, ಸುಗಮ ಹಾಗೂ ಸುವ್ಯವಸ್ಥಿತವಾಗಿ ನಡೆಸಬೇಕು. ಪರೀಕ್ಷೆಗೆ ಮೇಲ್ವಿಚಾರಕರ ನಿಯೋಜನೆ, ಪೊಲೀಸರು ಹಾಗೂ ಆರೋಗ್ಯ ಸಿಬ್ಬಂದಿ ನಿಯೋಜನೆ ಸೇರಿದಂತೆ ಪಿಯು ಪರೀಕ್ಷಾ ಪ್ರಾಧಿಕಾರದ ನಿರ್ದೇಶನವನ್ನು ಚಾಚೂ ತಪ್ಪದೆ ಪಾಲಿಸುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಅಪರ ಜಿಲ್ಲಾಧಿಕಾರಿಗಳು ಸೂಚಿಸಿದರು.

ಪರೀಕ್ಷಾ ಕೊಠಡಿಗಳಲ್ಲಿ ಸಿಸಿಟಿವಿ ಅಳವಡಿಸುವುದು ಸೇರಿದಂತೆ ಪರೀಕ್ಷಾ ಪಾವಿತ್ರ್ಯತೆಯನ್ನು ಕಾಪಾಡಬೇಕು. ಪರೀಕ್ಷಾ ಕೇಂದ್ರಗಳ ಚಲನವಲನಕ್ಕೆ ಸಂಬಂಧಿಸಿದಂತೆ ವೆಬ್‌ಕಾಸ್ಟಿಂಗ್ ವ್ಯವಸ್ಥೆ ಮಾಡಬೇಕು. ವಿದ್ಯಾರ್ಥಿಗಳು ನೋಂದಣಿ ಸಂಖ್ಯೆ ಹಾಗೂ ಕೊಠಡಿ ಸಂಖ್ಯೆ ಖಾತರಿ ಪಡಿಸಿಕೊಳ್ಳಲು ಪರೀಕ್ಷಾ ಕೇಂದ್ರದಲ್ಲಿ ಮಾಹಿತಿ ಒದಗಿಸುವಂತಾಗಬೇಕು ಎಂದರು.

ಪರೀಕ್ಷಾ ದಿನಗಳಲ್ಲಿ ಅಗತ್ಯ ವಾಹನ ನಿಯೋಜಿಸುವುದು ಜೊತೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗದಂತೆ ನೋಡಿಕೊಳ್ಳುವುದು, ಆರೋಗ್ಯ ಇಲಾಖೆಯಿಂದ ಶುಶ್ರೂಷಕರನ್ನು ನೇಮಿಸುವಂತೆ

☛4

## ಉದ್ಯೋಗ ನೇಮಕಾತಿ ವಯೋಮಿತಿ ಸಡಲಿಕೆ ಜೊತೆಗೆ ನಿರುದ್ಯೋಗ ಭತ್ಯೆ ನೀಡಲಿ – ಮಹೇಂದ್ರ ಕುಮಾರ ಮಿತ್ರ

**ಜನವಾದಿ ವಾರ್ತೆ**

ರಾಯಚೂರು ಫೆ 21– ವಿಧಾನಸಭಾ ಚುನಾವಣೆಯಲ್ಲಿ ನೀಡಿದ್ದ ಭರವಸೆಗಳಂತೆ ಎಲ್ಲಾ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವುದಾಗಿ ಹೇಳಿದ್ದ ಸರ್ಕಾರ, ಗ್ರೂಪ್ ಬಿ ಮತ್ತು ಸಿ ಹುದ್ದೆಗಳ ನೇರ ನೇಮಕಾತಿಯಲ್ಲಿ ಮೂರು ವರ್ಷ ವಯೋಮಿತಿ ಸಡಿಲಿಕೆ ನೀಡುವ ಮೂಲಕ ನಿರುದ್ಯೋಗಿಗಳಿಗೆ ಅನ್ಯಾಯ ಮಾಡಿದೆ ಎಂದು ಡಾ. ಅಂಬೇಡ್ಕರ್ ಪೀಪಲ್ಸ್ ಪಾರ್ಟಿ ಕಾರ್ಯಾಧ್ಯಕ್ಷ ಮಹೇಂದ್ರ ಕುಮಾರ ಮಿತ್ರ ಆರೋಪಿಸಿದರು.



ಅವರಿಂದು ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದವರು, ನಾಗರಿಕ ಸೇವಾ ಹುದ್ದೆಗಳು ಸಂಪೂರ್ಣ ಭರ್ತಿಯಾಗುವವರೆಗೆ ಸಂವಿಧಾನದ ಅನುಚ್ಛೇದ 41 ಅನ್ವಯ ನಿರುದ್ಯೋಗಿಗಳಿಗೆ ಭತ್ಯೆ ಯೋಜನೆ ಜಾರಿಗೊಳಿಸಬೇಕು 1971ರಲ್ಲಿ ಎಸ್ಸಿ/ಎಸ್ಟಿ ಮೀಸಲಾತಿ ವಿಳಂಬದಲ್ಲು ಪದವೀಧರರಿಗೆ ತಿಂಗಳಿಗೆ 150 ಹಾಗೂ ಸ್ನಾತಕೋತ್ತರ ಪದವೀಧರರಿಗೆ 250 ನಿರುದ್ಯೋಗ ಭತ್ಯೆ ನೀಡಲಾಗುತ್ತಿತ್ತು. ಪ್ರಸ್ತುತ ಬೆಲೆ ಏರಿಕೆ ಮತ್ತು ನಿರುದ್ಯೋಗ ಸಮಸ್ಯೆಯನ್ನು ಗಮನದಲ್ಲಿಟ್ಟು

☛4

### ಜಿಲ್ಲಾ ಅಭಿವೃದ್ಧಿ ಸಮನ್ವಯ ಮತ್ತು ಉಸ್ತುವಾರಿ ಸಮಿತಿ ಸಭೆ

# ಕೇಂದ್ರ ಪುರಸ್ಕೃತ ಯೋಜನೆಗಳ ಪ್ರಗತಿಗೆ ವೇಗ ನೀಡಿ: ಸಂಸದ ಜಿ.ಕುಮಾರ ನಾಯಕ

**ಜನವಾದಿ ವಾರ್ತೆ**

ರಾಯಚೂರು ಫೇ 21 – ರೈಲ್ವೆ ಲೈನ್ ನಿರ್ಮಾಣ ಯೋಜನೆ, ಇಂಡಿಯಾ ಪೋಸ್ಟ್, ಬಿಎಸ್‌ಎನ್‌ಎಲ್, ಸರ್ವ ಶಿಕ್ಷಣ ಶಿಕ್ಷಣ ಅಭಿಯಾನ, ಸ್ವಚ್ಛ ಭಾರತ ಮಿಷನ್, ಜಲಜೀವನ ಮಿಷನ್, ಪ್ರಧಾನಮಂತ್ರಿ ಉಜ್ವಲ ಯೋಜನೆ, ಕರ್ನಾಟಕ ರೈತ ಸುರಕ್ಷಾ ಪ್ರಧಾನಮಂತ್ರಿ ಫಸಲ್ ಭೀಮಾ ಯೋಜನೆ, ಸೇರಿದಂತೆ ವಿವಿಧ ಕೇಂದ್ರ ಪುರಸ್ಕೃತ ಯೋಜನೆಗಳ ಪ್ರಗತಿಗೆ ವೇಗ ನೀಡಬೇಕು ಎಂದು ರಾಯಚೂರು ಲೋಕಸಭಾ ಕ್ಷೇತ್ರದ ಸದಸ್ಯರಾದ ಜಿ. ಕುಮಾರ ನಾಯಕ ಅವರು ಅಧಿಕಾರಿಗಳಿಗೆ ಕಟ್ಟುನಿಟ್ಟಿನ ನಿರ್ದೇಶನ ನೀಡಿದರು.






ನಗರದ ಜಿಲ್ಲಾ ಪಂಚಾಯತ್ ಕಚೇರಿ ಸಭಾಂಗಣದಲ್ಲಿ ಫೆ.21ರಂದು ನಡೆದ ಜಿಲ್ಲಾ ಅಭಿವೃದ್ಧಿ ಸಮನ್ವಯ ಮತ್ತು ಉಸ್ತುವಾರಿ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಮೊದಲಿಗೆ ಕೃಷಿ ಇಲಾಖೆಯ ಯೋಜನೆಗಳ ಪ್ರಗತಿಯ ಬಗ್ಗೆ ಸಂಸದರು ಕೇಳಿದರು. ಕರ್ನಾಟಕ ರೈತ ಸುರಕ್ಷಾ ಪ್ರಧಾನಮಂತ್ರಿ ಫಸಲ್ ಭೀಮಾ ಯೋಜನೆಯಡಿ ರಾಯಚೂರು ಜಿಲ್ಲೆಯಲ್ಲಿ 2025ನೇ ಸಾಲಿನ ಮುಂಗಾರಿನಲ್ಲಿ 12,477 ರೈತರು ಮತ್ತು ಹಿಂಗಾರಿನಲ್ಲಿ 6909 ರೈತರು ನೋಂದಣಿ ಮಾಡಿದ್ದಾರೆ. ವಿಮಾ ಸಂಸ್ಥೆಯಿಂದ ಬೆಳೆವಿಮೆ ಪರಿಹಾರ ಇತ್ಯರ್ಥಪಡಿಸುವ ಕಾರ್ಯ ಪ್ರಗತಿಯಲ್ಲಿದೆ. ರಾಯಚೂರು ಜಿಲ್ಲೆಯಲ್ಲಿ ಒಟ್ಟು 2,34,988 ರೈತ–ರಿಗೆ 736.14 ಕೋಟಿ ರೂ. ಪಿಎಂ ಕಿಸಾನ್ ಯೋಜನೆಯಡಿ ಕೇಂದ್ರ ಸರ್ಕಾರವು ನೆರವು ನೀಡಿದೆ ಎಂದು ಕೃಷಿ ಜಂಟಿ ನಿರ್ದೇಶಕರು ಸಭೆಗೆ ಮಾಹಿತಿ ನೀಡಿದರು. ರಾಯಚೂರು ಫಲವತ್ತಾದ ಮಣ್ಣು ಹೊಂದಿದ ಜಿಲ್ಲೆಯಾಗಿದ್ದು, ರೈತರಿಗೆ ನ್ಯಾಯ ಸಿಗುವ ದಿಶೆಯಲ್ಲಿ ಒಂದು ಜಿಲ್ಲೆ ಒಂದು ಉತ್ಪನ್ನ ಯೋಜನೆಯ ಅನುಷ್ಠಾನಕ್ಕೆ ಹೆಚ್ಚಿನ ಒತ್ತು ಕೊಡಬೇಕು ಎಂದು ಸಂಸದರು ಕೃಷಿ ಅಧಿಕಾ–ರಿಗಳಿಗೆ ಸೂಚನೆ ನೀಡಿದರು. ಒಂದು ಜಿಲ್ಲೆ ಒಂದು ಉತ್ಪನ್ನ ಯೋಜನೆಯಡಿ ರಾಯಚೂರು ಜಿಲ್ಲೆಯಲ್ಲಿ ಒಣಮೆಣಸಿನಕಾಯಿ ಮಾರುಕಟ್ಟೆ ನಿರ್ಮಾಣಕ್ಕಾಗಿ ಆಯ್ಕೆ ಮಾಡಲಾಗಿರುತ್ತದೆ ಎಂದು ಕೃಷಿ ಅಧಿಕಾರಿಗಳು ಸಭೆಗೆ ವಿವರಿಸಿದರು.

ರಾಯಚೂರು ಜಿಲ್ಲೆಯಲ್ಲಿ ರೈಲ್ವಿ ಲೈನ್ ನಿರ್ಮಾಣ ಯೋಜನೆಯ ಪ್ರಗತಿಯ ಬಗ್ಗೆ ಸಂಸದರು ಕೇಳಿದರು. ಮುನಿರಾಬಾದ್–ಮೆಹಬೂಬನಗರ ರೈಲ್ವೆ ಲೈನ್ ನಿರ್ಮಾಣದ ಭೂಸ್ವಾಧೀನಕ್ಕೆ ಸಂಬಂಧಿಸಿದಂತೆ ಸಿಂಧನೂರ, ರಾಯಚೂರು, ಮಾನವಿ, ಸಿರವಾರ ತಾಲೂಕಿನ ಕೆಲವು ಹಳ್ಳಿಗಳಲ್ಲಿ ನಡೆದ ಭೂಸ್ವಾಧೀನ ಪ್ರದೇಶದ ವಿಸ್ತೀರ್ಣವನ್ನು ರೈಲ್ವೆ ಇಲಾಖೆಗೆ ಹಸ್ತಾಂತರಿಸಲಾಗಿದೆ. ಕೆಲವು ಕಡೆಗಳಲ್ಲಿ ಹೊಸದಾಗಿ ಪ್ರಸ್ತಾವನೆ ಸಲ್ಲಿಸಿದ್ದು ಭೂಸ್ವಾಧೀನ ಪ್ರಕ್ರಿಯೆಗೆ ಕ್ರಮ ವಹಿಸಲಾಗುತ್ತದೆ. ಗದಗ–ವಾಡಿ ರೈಲ್ವೆ ಯೋಜನೆಗೆ ಸಂಬಂಧಿಸಿದಂತೆ ರಾಯಚೂರು ತಾಲೂಕಿನ ಕುರುಬದೊಡ್ಡಿ, ಚಂದ್ರಬಂಡ, ಸಿಂಗನೋಡಿ ಗ್ರಾಮಗಳಲ್ಲಿ ಹೊಸದಾಗಿ ಕೈಗಾರಿಕಾ ಪ್ರದೇಶ ಮತ್ತು ಸೌರ ವಿದ್ಯುತ್ ಸ್ಥಾಪನೆಗಾಗಿ ಭೂಸ್ವಾಧಿನಪಡಿಸಿಕೊಳ್ಳುವ ಪ್ರಕ್ರಿಯೆ ನಡೆಯುತ್ತಿದೆ ಎಂದು ಎಂದು ರೈಲ್ವೆ ಇಲಾಖೆಯ ಅಧಿಕಾರಿಗಳು ಸಭೆಗೆ ಮಾಹಿತಿ ನೀಡಿದರು.

ಬೆಂಗಳೂರು, ಕಲಬುರಗಿ, ಸೊಲ್ಲಪುರ ಸೇರಿದಂತೆ ಪ್ರಮುಖ ವಾಣಿಜ್ಯ ನಗರಗಳ ಮೂಲಕ ದಕ್ಷಿಣದ ಚೆನ್ನೈದಿಂದ

☛4

### ಪೊಲೀಸ್ ಕಿರುಕುಳ ಆರೋಪ: ತನಿಖೆಗೆ ನೊಂದ ಕುಟುಂಬ

## ಮುದಗಲ್ ಪಿಎಸ್‌ಐ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು ಆಗ್ರಹ

**ಜನವಾದಿ ವಾರ್ತೆ**

ಲಿಂಗಸೂಗೂರು ಫೆ 21– ಮುದಗಲ್ ಪೊಲೀಸ್ ಠಾಣೆಯ ಸಬ್ ಇನ್ಸ್‌ಪೆಕ್ಟರ್ ವೆಂಕಟೇಶ್ ಮಾಡಗಿರಿ ಅವರು ಸುಳ್ಳು ಪ್ರಕರಣ ದಾಖಲಿಸಿ ದೈಹಿಕ ಹಾಗೂ ಮಾನಸಿಕ ಹಿಂಸೆ ನೀಡುತ್ತಿದ್ದಾರೆ ಎಂದು ಆರೋಪಿಸಿರುವ ಮಸ್ಕಿ ತಾಲೂಕಿನ ಮಟ್ಟೂರು ತಾಂಡಾ ನಿವಾಸಿ ಸಕ್ಕುಬಾಯಿ, ಪ್ರಕರಣದ ಸಮಗ್ರ ತನಿಖೆ ನಡೆಸಿ ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದ್ದಾರೆ.




ಪಟ್ಟಣದ ಪತ್ರಿಕಾ ಭವನದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 2025ರ ಆಗಸ್ಟ್ 29ರಂದು ತಮ್ಮ ಪತಿ ರಾಮಣ್ಣ ಅವರ ಮೇಲೆ ಮಟ್ಟೂರು ತಾಂಡಾದಲ್ಲಿ ಮರಣಾಂತಿಕ ಹಲ್ಲೆ ನಡೆದ ಹಿನ್ನೆಲೆಯಲ್ಲಿ ಮುದಗಲ್ ಠಾಣೆಯಲ್ಲಿ ದೂರು ದಾಖಲಿಸಲಾಗಿತ್ತು. ಆದರೆ ಆರೋಪಿಗಳನ್ನು ಬಂಧಿಸುವ ಬದಲು ಪಿಎಸ್‌ಐ ವೆಂಕಟೇಶ್ ಮಾಡಗಿರಿ ಅವರು ಆರೋಪಿಗಳಿಗೆ ಪ್ರತಿದೂರು ನೀಡುವಂತೆ ಪ್ರಚೋದಿಸಿ, ದೂರುದಾರರ ಕುಟುಂಬದ ಮೇಲೆಯೇ ಸುಳ್ಳು ಪ್ರಕರಣ ದಾಖಲಿಸಿದ್ದಾರೆ ಎಂದು ದೂರಿದರು.

☛4

## ಮಾವಿನಕರೆ : ಛತ್ರಪತಿ ಶಿವಾಜಿ ಮಹಾರಾಜರ ಮೂರ್ತಿ ನಿರ್ಮಾಣಕ್ಕೆ ತಕರಾರು

**ಜನವಾದಿ ವಾರ್ತೆ**

ರಾಯಚೂರು ಫೆ 21– ನಗರದ ಮಾವಿನ ಕೆರೆಯ ಅಂಬಾಭವಾನಿ ಗುಡಿಯ ಹತ್ತಿರ ಮರಾಠ ಹಾಗೂ ಹಿಂದೂ ಸಮಾಜದ ವತಿಯಿಂದ "ಛತ್ರಪತಿ ಶಿವಾಜಿ ಮಹಾರಾಜ ಮೂರ್ತಿಯನ್ನು ಕೂಡಿಸಲು ಮಹಾನಗರ ಪಾಲಿಕೆಗೆ ಅನುಮತಿಯನ್ನು ಕೋರಲಾಗಿತ್ತು. ಆದರೆ ಇದೀಗ ಯಾವುದೇ ಕಾರಣಕ್ಕೂ ಛತ್ರಪತಿ ಶಿವಾಜಿ ಮಹಾರಾಜರ ಮೂರ್ತಿಯನ್ನು ನಿರ್ಮಿಸಲು ಅನುಮತಿಯನ್ನು ನೀಡಬಾರದು ಎಂದು ನಗರದ ನಿವಾಸಿಯಾದ ಶೇಖ್ ಮಾಸೂಮ್ ಎಂಬುವವರು ಮಹಾನಗರ ಪಾಲಿಕೆಗೆ ತಕರಾರು ಅರ್ಜಿಯನ್ನು ಸಲ್ಲಿಸಿದ್ದಾರೆ.



ಈ ಅರ್ಜಿಯಲ್ಲಿ ಒಂದು ವೇಳೆ ಅಂಬಾಭವಾನಿ ದೇವಸ್ಥಾನದ ಬಳಿ ಶಿವಾಜಿಯ ಮೂರ್ತಿಯನ್ನು ನಿರ್ಮಿಸಲು ಅನುಮತಿ ನೀಡಿದ್ದೇ ಆದಲ್ಲಿ ಅದರ ಪಕ್ಕದಲ್ಲೇ ಟಿಪ್ಪು ಸುಲ್ತಾನರ ಮೂರ್ತಿಯನ್ನು ಕೂಡಿಸಬೇಕಾಗುತ್ತದೆ. ಈಗಾಗಿ ಅನುಮತಿ ಕೊಡುವುದಾದರೆ ಇಬ್ಬರಿಗೂ ನೀಡಬೇಕೆಂದು ಇಲ್ಲವಾದಲ್ಲಿ ಇಬ್ಬರಿಗೂ ಪರವಾನಿಗೆ ನೀಡಬಾರದೆಂದು ನಗರದ ಶೇಖ್ ಮಾಸೂಮ್ ಎಂಬ ವ್ಯಕ್ತಿಯ ಮಹಾನಗರ ಪಾಲಿಕೆಯ ಆಯುಕ್ತರಿಗೆ ತಕರಾರು ಅರ್ಜಿಯನ್ನು ಸಲ್ಲಿಸಿದ್ದು. ಈ ಒಂದು ಮನವಿ ಪತ್ರ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದ್ದು. ಇದ್ಯಾವ ಸೆಲ್ಯುಲರಿಸಂ ಅಂಬಾಭವಾನಿ ಮಂದಿರದಲ್ಲಿ ಹಿಂದೂಗಳ ಅಸ್ಮಿತೆಯ ದೊರೆಯ ಮೂರ್ತಿಯನ್ನು ಕೂಡಿಸುವುದಕ್ಕೆ ನಿರ್ದಿಷ್ಟ ಧರ್ಮದ ವ್ಯಕ್ತಿಯಿಂದ ಪ್ರಶ್ನೆ ಎದ್ದಿದ್ದು ಭಾರೀ ಚರ್ಚೆಗೆ ಕಾರಣವಾಗಿದೆ.

# ಹೂವಿನಹೆಡ್ಗಿಯಲ್ಲಿ ಇಂದು ಶ್ರೀ ಲಕ್ಕಮ್ಮ ದೇವಿ ದೇವಸ್ಥಾನ ಉದ್ಘಾಟನೆ ಹಾಗೂ ಮೂರ್ತಿ ಪ್ರಾಣ ಪ್ರತಿಷ್ಠಾಪನಾ ಸಮಾರಂಭ

ಜನವಾದಿ ವಾರ್ತೆ

ದೇವದುರ್ಗ ಫೆ 21– ತಾಲೂಕಿನ ಹೂವಿನಹೆಡ್ಗಿ ಗ್ರಾಮದಲ್ಲಿ ಫೆ.22ರಂದು ಶ್ರೀ ಲಕ್ಕಮ್ಮದೇವಿ ದೇವಸ್ಥಾನದ ಉದ್ಘಾಟನೆ ಹಾಗೂ ಮೂರ್ತಿ ಪ್ರಾಣ ಪ್ರತಿಷ್ಠಾಪನಾ ಸಮಾರಂಭ ಜರುಗಲಿದೆ ಎಂದು ಮುಖಂಡ ಶರಣಗೌಡ ಮಾ.ಪಾಟೀಲ್ ಹೂವಿನಹೆಡ್ಗಿ ತಿಳಿಸಿದರು.



ಪಟ್ಟಣದ ಪ್ರವಾಸಿಮಂದಿರದಲ್ಲಿ ಶುಕ್ರವಾರ ಸುದ್ದಿಗಾರ ರೊಂದಿಗೆ ಮಾತನಾಡಿ, ಸುಮಾರು 400ಕ್ಕೂ ಹೆಚ್ಚು ವರ್ಷಗಳ ಐತಿಹಾಸಿಕ ಹಿನ್ನಲೆಯಿರುವ ಶ್ರೀಲಕ್ಕಮ್ಮದೇವಿಯನ್ನು ಈ ಭಾಗದ ಭಕ್ತರು ಶ್ರದ್ಧಾಭಕ್ತಿಯಿಂದ ಸೇವೆ ಸಲ್ಲಿಸುವ ಪರಿಪಾಠ ಮುಂದುವರೆದಿದೆ. ಹೂವಿನ ಹೆಡ್ಗಿ ಗ್ರಾಮ ಮತ್ತು ಗ್ರಾಮದ ಸೀಮಾಂತರದಲ್ಲಿ ಕೋಳಿ, ಕುರಿಗಳ ಮಾಂಸ ಸೇವಿಸುವದನ್ನು ನಿಷೇಧವಾಗಿರುವದು ಭಕ್ತರ ಭಕ್ತಿಯ ಶ್ರದ್ಧೆಯನ್ನು ತೋರಿಸುತ್ತಿದ್ದು, ಈ ಪರಿಪಾಠ ಅನೇಕ ವರ್ಷಗಳಿಂದ ಮುಂದುವರೆದು ಬಂದಿದೆ. ಗಡ್ಡಿಗೂಳಿ ಶ್ರೀ ಬಸವೇಶ್ವರ ದೇವಸ್ಥಾನ ಹತ್ತಿರ ಇರುವ ಕೃಷ್ಣಾನದಿ ತಟದಲ್ಲಿ ಮೂಲ ದೇವಿಯ ಪುಣ್ಯತಾಣವಾಗಿದೆ.ಗಡ್ಡಗೂಳಿ ಶ್ರೀ ಬಸವೇಶ್ವರ ಮತ್ತು ಶ್ರೀಲಕ್ಕಮ್ಮದೇವಿ ಅಣ್ಣ ತಂಗಿಯಾಗಿದ್ದರು ಎಂಬ ಪ್ರತೀತಿ ಇದೆ.ದೇವಸ್ಥಾನದಲ್ಲಿ ಪೂಜೆ ಸಲ್ಲಿಸುವ ಭಕ್ತರು ಮತ್ತು ಮದುವೆ ಸಮಾರಂಭಗಳಲ್ಲಿ ದೇವಿಗೆ ವಿಶೇಷ ಪೂಜೆ ಸಲ್ಲಿಸುತ್ತಾರೆ.

ಫೆ.22, ಭಾನುವಾರ ಶ್ರೀ ಲಕ್ಕಮ್ಮ ದೇವಿಯ ಕುಂಭಮತ್ತು ಆರತಿ ಮೇಳಗಳು,ಡೊಳ್ಳು, ಭಜನಾ ತಂಡಗಳಿಂದ ಗ್ರಾಮದ ಪ್ರಮುಖ ಬೀದಿಗಳಲ್ಲಿ ಭವ್ಯ ಮೆರವಣಿಗೆ ಮಾಡಲಾಗುವದು.

ಇಂಚಲ ಸಾಧು–ಸಂಸ್ಥಾನ ಮಠದ ಶ್ರೀ ಜಗದ್ಗುರು ಡಾ.ಶಿವಾನಂದ ಭಾರತಿ ಮಹಾಸ್ವಾಮೀಜಿಗಳ ಅಪ್ಪಣೆ ಮೇರೆಗೆ ಎಲ್ಲಾ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ.ಫೆ.22ರಿಂದ ಫೆ.26ರವರೆಗೆ ಜರುಗಲಿರುವ ಕಾರ್ಯಕ್ರಮಗಳಲ್ಲಿ ಶ್ರೀದೇವಿ ಮೂರ್ತಿಗೆ ರುದ್ರಾಭಿಷೇಕ,ಹೋಮ ಹಾಗೂ ಮುತ್ತೈದಿಯರಿಂದ ಉಡಿ ತುಂಬುವುದು, ಸಂಜೆ 6ರಿಂದ ಸಾಮೂಹಿಕ ಶ್ರೀದೇವಿ ಪಾರಾಯಣ,ವೇದಾಂತ ಪ್ರವಚನ ನಡೆಯಲಿದೆ.

ಬಳಿಕ ಜರುಗಲಿರುವ ದರ್ಮ ಸಭೆಯಲ್ಲಿ ಸಚಿವ ಎನ್.ಎಸ್.ಬೋಸರಾಜು.ಸಂಸದ ಜಿ.ಕುಮಾರನಾಯಕ, ಶಾಸಕಿ ಕರೆಮ್ಮ ಜಿ.ನಾಯಕ ಸೇರಿದಂತೆ ಅನೇಕ ಜನಪ್ರತಿನಿಧಿಗಳು ಪಾಲ್ಗೊಳ್ಳಲಿದ್ದಾರೆ.

ಫೆ.23ರಂದು ಜರುಗಲಿರುವ ಧರ್ಮ ಸಭೆಯಲ್ಲಿ ಚಿಪ್ಪಲಕಟ್ಟಿ ಶ್ರೀ ಲೀಲಾವತಾರಿ ಶಿವಾನಂದ ಸ್ವಾಮೀಜಿ, ದೇವರಕೊಂಡ ಲೀಲಾಮಠದ ಸದ್ಗುರು ಬಾಲಯೋಗಿ ಮಾಣಿಕ್ಯ ವೃಷಭೇಂದ್ರ ಸ್ವಾಮೀಜಿ, ಶಿಖರ ಮಠದ ಕಪಿಲ ಸಿದ್ದರಾಮೇಶ್ವರ ಸ್ವಾಮೀಜಿ, ಲಕ್ಷ್ಮೀಪೂರ ಶ್ರೀಮಠದ ಡಾ.ಚನ್ನ ಮಲ್ಲಿಕಾರ್ಜುನ ಶಿವಾಚಾ ರ್ಯರು, ಸುಲ್ತಾನಪೂರ ಶ್ರೀ ಶಂಭುಸೋಮನಾಥ ಸ್ವಾಮೀಜಿ, ವೀರಗೋಟದ ಶ್ರೀ ಅಡವಿ ಲಿಂಗ ಮಹಾರಾಜರು, ದೇವರಗುಡ್ಡದ

ಗಿರಿಮಲ್ಲೇಶ್ವರ ಶಿವಾಚಾರ್ಯ ಸ್ವಾಮೀಜಿ, ಕನ್ನೂರ ಹಿರೇಮಠದ ಶ್ರೀ ಗುರು ಕುಮಾರೇಶ್ವರ ಸ್ವಾಮೀಜಿ, ಹೂವಿನಹೆಡ್ಗಿ ಗೂಳಯ್ಯ ಸ್ವಾಮಿ ಹಿರೇಮಠ, ಹೂವಿನಹೆಡ್ಗಿ ಅಮರಯ್ಯ ಸ್ವಾಮಿ, ಬಸವಂತಪ್ಪ ಅರ್ಚಕರು ಶ್ರೀ ಗಡ್ಡಗೂಳಿ ದೇವಸ್ಥಾನ ಸೇ–ರಿದಂತೆ ಅನೇಕ ಸ್ವಾಮೀಜಿಗಳು ಪಾಲ್ಗೊಳ್ಳಲಿದ್ದಾರೆ.

ಈ ಸಮಾರಂಭದಲ್ಲಿ ವಗಡಂಬಳಿ, ಜೋಳದಹೆಡ್ಗಿ, ಅಂಚೆಸೂಗೂರು, ಗೋಪಾಳಪೂರ, ದೊಂಡಂಬಳಿ, ಬೆಣಕಲ್, ನಗರಗುಂಡ, ದೇವದುರ್ಗ, ಗೌರಂಪೇಟ, ಮೆದರಗೊಳ, ಕೋಣಚಪ್ಪಳಿ, ಕರ್ಕಿಹಳ್ಳಿ, ಕೋಳೂರ, ಮರಕಲ್, ಟೊಣ್ಣೂರ, ಗೌಡೂರು, ಕೊಪ್ಪರ, ಅರಕೇರಾ ಸೇರಿದಂತೆ ಅನೇಕ ಸುತ್ತಲಿನ ಗ್ರಾಮಗಳ ಭಕ್ತಾದಿಗಳು ಪಾಲ್ಗೊಳ್ಳಲಿದ್ದಾರೆ ಎಂದು ಮುಖಂಡ ಶರಣಗೌಡ ಮಾ.ಪಾಟೀಲ್ ಹೂವಿನಹೆಡ್ಗಿ ತಿಳಿಸಿದರು.

ಈ ಸಂದರ್ಭದಲ್ಲಿ ಗ್ರಾಮದ ಮುಖಂಡರಾದ ಬಸವರಾಜ ಎಂ.ಪಾಟೀಲ್, ಶಂಕರಲಿಂಗ ದೊಡ್ಡನಿ, ಬಸಪ್ಪ ಅಂಬಿಗೇರ, ಅಮರೇಶ ದಳಪತಿ, ಧೂಳಪ್ಪ, ಮಲ್ಲಪ್ಪ ನಾಯಕ ಹಾಗೂ ಇತರರು ಇದ್ದರು.

# ಬಹುಸಂಖ್ಯಾತರ ಹೆಸರಿನಲ್ಲಿ ನಾಗರಿಕರ ಮೇಲೆ ಸರ್ವಾಧಿಕಾರ ಹೇರಿಕೆ: ಬಂಜಗೆರೆ ಜಯಪ್ರಕಾಶ

## ಮನುಷ್ಯತ್ವದೆಡೆ ಸಮುದಾಯ–50" ಸಂಭ್ರಮ : ಫ್ಯಾಸಿಂಸಂ ಮತ್ತು ಸಾಂಸ್ಕೃತಿಕ ರಾಜಕಾರಣ' ಕುರಿತ ಗೋಷ್ಠಿ

ಜನವಾದಿ ವಾರ್ತೆ

ರಾಯಚೂರು ಫೆ 21– ಜಾತಿ, ಧರ್ಮ, ಬಹುಸಂಖ್ಯೆಯ ಹೆಸರಿನಲ್ಲಿ ಅಭಿವ್ಯಕ್ತ ಸ್ವಾತಂತ್ರ್ಯ, ದೇಶದ ನಾಗರಿಕರ ಹಕ್ಕುಗಳನ್ನು ಕಸಿದುಕೊಳ್ಳಲಾಗುತ್ತಿದೆ. ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಕೇವಲ ಒಂದು ತಂಡ ಮಾತ್ರ ಹಕ್ಕುಗಳ ವಿರುದ್ಧ ಕೆಲಸ ಮಾಡಿತ್ತು ಈಗ ಆಡಳಿತ ವ್ಯವಸ್ಥೆ, ನ್ಯಾಯಾಂಗ, ಮಾಧ್ಯಮಗಳು ಪರೋಕ್ಷವಾಗಿ ಸಮ್ಮತಿ ನೀಡಿವೆ ಎಂದು ಚಿಂತಕ ಬಂಜಗೆರೆ ಜಯಪ್ರಕಾಶ್ ಅಭಿಪ್ರಾಯಪಟ್ಟರು.




ನಗರದ ಪಂಡಿತ್ ಸಿದ್ಧರಾಮ ಜಂಬಲದಿನ್ನಿ ರಂಗಮಂದಿರದಲ್ಲಿ 'ಸಮುದಾಯ ರಾಯಚೂರು' ಸಾಂಸ್ಕೃತಿಕ ಸಂಘಟನೆಯ ಸುವರ್ಣ ಮಹೋತ್ಸವದ ಪ್ರಯುಕ್ತ "ಮನುಷ್ಯತ್ವದೆಡೆ ಸಮುದಾಯ–50" ಜಾಥಾ ಉದ್ಘಾಟಿಸಿ ಅವರು ಮಾತನಾಡಿದ ಅವರು, ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ಪತ್ರಿಕೆಗಳು ಸಂಪಾದಕೀಯದ ಮೂಲಕ, ಪ್ರಗತಿಪರರು, ಬುದ್ಧಿಜೀವಿಗಳು ವಿವಿಧ ಮಾರ್ಗದಿಂದ ಪ್ರತಿಭಟಿಸಿದ್ದರು. ರಾಜಕೀಯ ಸರ್ವಾಧಿಕಾರದ ವಿರುದ್ಧ ಹೋರಾಟ ಮಾಡಿ ಪ್ರಜಾಪ್ರಭುತ್ವ ಗಟ್ಟಿಗೊಳಿಸುವ ಕೆಲಸ ಮಾಡಿದ್ದರು. ಸಮುದಾದಯ ಸಂಘಟನೆಯೂ ಬೀದಿನಾಟಕ, ಸಾಂಸ್ಕೃತಿಕ ಚಟುವಟಿಕೆಗಳ ಮೂಲಕ ಹೋರಾಟದಲ್ಲಿ ಭಾಗವಹಿಸಿತ್ತು. ಆದರೆ ಈಗ ಎಡಪಂಥೀಯ ಚಿಂತಕರು, ಎಡಪಕ್ಷಗಳು ಸಮಾಜವಾದಿ ಆಶಯಕ್ಕೆ ಐಕ್ಯ ಹೋರಾಟ ಮಾಡುತ್ತಿಲ್ಲ,. ರಂಗಭೂಮಿ ಕಲೆ ಬೀದಿಗರಂಗ ಚಳುವಳಿ ಸೀಮಿತವ್ಯಾಪ್ತಿಗೊಳಪಟ್ಟಿದೆ. ಬಹುಸಂಖ್ಯಾತರು, ಸಂಸ್ಕೃತಿ, ರಾಜ–ಕೀಯ ಪಕ್ಷ, ಸಂಘಟನೆ ಸೇರಿ ಇಡೀ ಪ್ರಭುತ್ವ ಸರ್ವಾಧಿಕಾರಕ್ಕೆ ಬೆಂಬಲಿಸುತ್ತಿದೆ ಹಾಗೂ ಬಹುಸಂಖ್ಯಾತರು ಮತಗಳಾಗಿ ಗೆಲ್ಲಿಸುತ್ತಿದ್ದಾರೆ ಎಂದು ಕಳವಳ ವ್ಯಕ್ತಪಡಿಸಿದರು.

ದೇಶಕ್ಕೆ ಅಂಬೇಡ್ಕರ್ ನೀಡಿರುವ ಮಹಾನ್ ಕೊಡುಗೆ ಸಂವಿಧಾನ. ಎಲ್ಲರಿಗೂ ಸಮಾನ ಹಕ್ಕುಗಳನ್ನು ಕೊಟ್ಟಿದೆ. ಹಕ್ಕುಗಳ ಬಗ್ಗೆ ಮಾತನಾಡುತ್ತೇವೆಯೇ ಹೊರತು, ಕರ್ತವ್ಯದ ಬಗ್ಗೆ ಮಾತನಾಡುತ್ತಿಲ್ಲ. ಕರ್ತವ್ಯ ನಿರ್ವಹಿಸಿದಾಗಲೇ ಹಕ್ಕುಗಳು ದೊರೆಯುತ್ತವೆ ಎಂದು ತಿಳಿಸಿದರು.

ಹಿರಿಯ ಚಿಂತಕ ಆರ್ ಕೆ ಹುಡಗಿ ಅವರು 'ಸಮುದಾಯ ರಾಯಚೂರು ನಡೆದು ಬಂದ ದಾರಿ'ಕುರಿತು ಮಾತನಾಡಿ, ಸಮುದಾಯ ಸಂಘಟನೆ ನಾಟಕಗಳಿಂದ ಆರಂಭವಾಗಿ ಆಂದೋಲನ, ಕ್ರಾಂತಿಕಾರಿ ಹೋರಾಟವನ್ನು ಮಾಡಿ ನಾಡಿನಾದ್ಯಂತ ಮನೆಮಾತಾಗಿದೆ ಎಂದು ಹೇಳಿದರು.

ರಾಜಕೀಯ ಸಮಾನತೆ, ಸಾಂಸ್ಕೃತಿಕ ಹೋರಾಟ ಅನಿವಾರ್ಯವಾಗಿದೆ. ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವ ಎಂಬ ಡಾ.ಬಿ.ಆರ್ ಅಂಬೇಡ್ಕರ್ ಆಶಯದಂತೆ ದೇಶ ನಿರ್ಮಾಣವಾಗಬೇಕು. ಜನರ ಮನಸ್ಸನ್ನು ಕಟ್ಟುವ ಕೆಲಸ ಆಗಬೇಕು. ಸಂವೇದನಶೀಲತೆ ಜಾಗೃತಗೊಳಿಸಬೇಕು. ನಾವು ಬಿಕ್ಕಟ್ಟಿನ ಕಾಲದಲ್ಲಿದ್ದೇವೆ. ವೈಚಾರಿಕ ಪರಂಪರೆ ಬಸವಾದಿ ಶರಣರಿಂದ ಆರಂಭವಾಗಿತ್ತು, ಅದು ಎಂ.ಎಂ ಕಲ್ಬುರ್ಗಿ, ಗೌರಿ ಲಂಕೇಶ, ಭನ್ಸಾರೆ ಅವರೂ ಮುಂದುವರೆಸಿದ್ದರು ಇವರನ್ನು ಸಹಿಸದ ಫ್ಯಾಸಿಸಂ ಶಕ್ತಿ ಕೊಲೆ ಮಾಡಿದ್ದು ಅವರ ವಿಚಾರಗಳನ್ನು ಜೀವಂತವಾಗಿಸಬೇಕಿದೆ ಎಂದು ಕಿವಿಮಾತು ಹೇಳಿದರು.

ಚಿಂತಕ ರಹಮತ್ ತರೀಕೆರೆ ' ಫ್ಯಾಸಿಸಂ ಮತ್ತು ಸಾಂಸ್ಕೃತಿಕ ರಾಜಕಾರಣ' ಕುರಿತ ಗೋಷ್ಠಿಯಲ್ಲಿ ಮಾತನಾಡಿ, ಫ್ಯಾಸಿಸಂ ಎಲ್ಲಾ ದೇಶಗಳಲ್ಲಿ ಜಾರಿಯಲ್ಲಿದೆ. ಇದಕ್ಕೆ ಬಂಡವಾಳ ಶಾಹಿಗಳು, ಆಡಳಿತ ಪಕ್ಷದ ನಾಯಕರು ಪೋಷಿಸುತ್ತಿದ್ದಾರೆ. ಫ್ಯಾಸಿಸಂ

ಹಲವು ಮುಖಗಳಿವೆ. ನಮ್ಮ ಧರ್ಮವೇ ಶ್ರೇಷ್ಠ, ಇತರೆ ಧರ್ಮ ಕನಿಷ್ಠ ಎಂಬ ಭಾವನೆ, ಬಣ್ಣ, ಭಾಷೆ, ಸಂಸ್ಕೃತಿಯ ಹೆಸರಿನಲ್ಲಿ ಜನರನ್ನು ವಿಭಜಿಸಿ ದೌರ್ಜನ್ಯ ಮಾಡಲಾಗುತ್ತಿದೆ. ಆಹಾರದ ಹಕ್ಕು ಕಸಿದುಕೊಂಡು ಸಸ್ಯಾಹಾರವೇ ಶ್ರೇಷ್ಠ, ನಾವು ಸೇವಿಸುವ ಆಹಾರವೇ ಇತರರು ಸೇವಿಸಬೇಕು ಎಂಬ ಧೋರಣೆ ಇವೆ.

ಹೋರಾಟಗಾರ ರಾಘವೇಂದ್ರ ಕುಷ್ಟಗಿ ಅಧ್ಯಕ್ಷತೆ ವಹಿಸಿದ್ದರು. ಸಮು–ರಿಯಮ್ಮ ಚೂಡಿ, ವೆಂಕಟನರಸಿಂಹಲು ರಂಗಗೀತೆಗಳನ್ನು ಪ್ರಸ್ತುತಪಡಿದರು.

ಇದೇ ವೇಳೆ ಸಮುದಾಯದಿಂದ ಸಿ.ಬಸಲಿಂಗಯ್ಯ, ಚಂದ್ರಶೇಖರ ಬಾಳೆ, ಕರಿಯಪ್ಪ ಮಾಸ್ತರ್, ವಿ.ಎನ್ ಅಕ್ಕಿ, ಬಿ.ರಾಜಶೇಖರ, ವೀರಹನುಮಾನ ಬಸವರಾಜ ಕಳಸ ಸೇರಿ ಅನೇಕ ಸಾಧಕರಿಗೆ ಸನ್ಮಾನ ಮಾಡಲಾಯಿತು.

ಶರಣು ಮಾಲಿಪಾಟೀಲ, ಶ್ಯಾಮಲಾ ಪೂಜಾರ, ಎಸ್. ದೇವೇಂದ್ರ ಗೌಡ ಉಪಸ್ಥಿತರಿದ್ದರು.

# ಜ್ಯೋತಿರ್ಲಿಂಗಗಳ ದಿವ್ಯ ದರ್ಶದಿಂದ ಮೋಕ್ಷ ಪ್ರಾಪ್ತಿ: ಕಿಡಿಗಣ್ಣಯ್ಯ ಸ್ವಾಮಿ



ಜನವಾದಿ ವಾರ್ತೆ

ಮಾನ್ವಿ ಫೆ 21– ಪಟ್ಟಣದ ಓಂ.ಮಂಡಳಿ ಶಿವಶಕ್ತಿ ಅವತಾರ್ ಸೇವಾ ಸಂಸ್ಥಾನ್ ಮಾನ್ವಿ ಶಾಖೆಯ ಸಭಾಂಗಣದಲ್ಲಿ ನಡೆದ ಶಿವಜಯಂತಿ ಕಾರ್ಯಕ್ರಮವನ್ನು ಉಮಳಿಹೊಸೂರು ಕಿಡಿಗಣ್ಣಯ್ಯ ಸ್ವಾಮಿಗಳು ಉದ್ಘಾಟಿಸಿ ಮಾತನಾಡಿ ನಮ್ಮ ದೇಶದಲ್ಲಿ ಆಚ–'ರಿಸುವ ಪ್ರತಿಯೊಂದು ಆಚರಣೆಗಳಿಗೆ ಹಾಗೂ ಹಬ್ಬಗಳಿಗೆ ತಮ್ಮದೆ ಆದ ಮಹತ್ವವಿದೆ ಅದ್ದರಿಂದ ನಮ್ಮದೇಶದ ಸನಾತನ ಪರಂಪರೆ,ಧಾರ್ಮಿಕ ಆಚರಣೆಗಳ ಬಗ್ಗೆ ನಮ್ಮ ಮುಂದಿನ ಪಿಳಿಗೆಗೆ ತಿಳಿಸುವ ಕಾರ್ಯವನ್ನು ಓಂ.ಮಂಡಳಿ ಶಿವಶಕ್ತಿ ಅವತಾರ್ ಸೇವಾ ಸಂಸ್ಥಾನ್ ಮಾಡುತ್ತಿದೆ ಭಾರತದ ಪುರಾಣಗಳಲ್ಲಿ ತಿಳಿಸಿರುವಂತೆ ಶಿವನ ಸಾಕ್ಷತ ಪ್ರತಿರೂಪವೇ ಆಗಿರುವ ದೇಶದ ಪ್ರಸಿದ್ಧ 12 ಜ್ಯೋತಿರ್ಲಿಂಗಗಳ ದಿವ್ಯ ದರ್ಶನವನ್ನು ಪಡೆದವರಿಗೆ ನಿಶ್ಚಿತವಾಗಿ ಮೋಕ್ಷ ಪ್ರಾಪ್ತಿಯಾಗಿ ಶಿವನಸಾನಿಧ್ಯ ದೊರೆಯುತ್ತದೆ ಎಂದು ತಿಳಿಸಿದರು.

ಓಂ.ಮಂಡಳಿ ಶಿವಶಕ್ತಿ ಅವತಾರ್ ಸೇವಾ ಸಂಸ್ಥಾನ್ ಮಾನ್ವಿ ಶಾಖೆಯ ಸಂಚಾಲಕರಾದ ಅಕ್ಕಮಕ್ಕ ಮಾತನಾಡಿ ಅತ್ಮ ಶುದ್ಧಿಯಿಂದ ಮಾತ್ರ ಭಗವಂತನನ್ನು ಕಾಣುವುದಕ್ಕೆ ಸಾಧ್ಯ ಅತ್ಮ ಶುದ್ಧಿಯನ್ನು ಹೊಂದುವುದಕ್ಕೆ ನಿತ್ಯ ಓಂಕಾರ ಸ್ಮರಣೆ ,ಯೋಗ,ಧ್ಯಾನ, ತ್ರಯಂಬಕ ಮಂತ್ರ ಪಠಣೆಯಿಂದ ನಮ್ಮಲಿರುವ ನಕಾರತ್ಮಕತೆ ಹೋಗಿ ಸಕಾರತ್ಮಕತೆ ಮೂಡುತ್ತದೆ ಎಂದು ತಿಳಿಸಿದರು.

ಓಂ.ಮಂಡಳಿ ಶಿವಶಕ್ತಿ ಅವತಾರ್ ಸೇವಾ ಸಂಸ್ಥಾನ್ ಶಿಖಾರಿಪುರ ಶಾಖೆಯ ಸಂಚಾಲಕರಾದ ಮಂಜುನಾಥ, ಶಿಕ್ಷಕರಾದ ಎಂ.ಎಚ. ಹಿರೇಮಠ ಸೇರಿದಂತೆ ಪರಿವಾರದ ಸದಸ್ಯರು ಭಾಗವಹಿಸಿದರು.

# ರಾಯಚೂರು ಮಹಾನಗರ ಪಾಲಿಕೆ ಆಯುಕ್ತರಿಂದ ನಗರ ಸಂಚಾರ: ಕಾಮಗಾರಿಗಳ ಪರಿಶೀಲನೆ

ಜನವಾದಿ ವಾರ್ತೆ

ರಾಯಚೂರು ಫೆ 21 – ರಾಯಚೂರು ಮಹಾನಗರ ಪಾಲಿಕೆಯ ಆಯುಕ್ತರಾದ ಜುಬಿನ್ ಮೊಹಾಪಾತ್ರ ಅವರು ಫೆ.20ರಂದು ನಗರದ ವಿವಿಧ ಪ್ರದೇಶಗಳಲ್ಲಿ ಸಂಚರಿಸಿ ಪ್ರಗತಿಯಲ್ಲಿರುವ ಮತ್ತು ಪ್ರಸ್ತಾವಿತ ಅಭಿವೃದ್ಧಿ ಕಾಮಗಾರಿಗಳು ಹಾಗೂ ಕಾಮಗಾರಿಗಳ ಸ್ಥಳ ಪರಿಶೀಲನೆ ನಡೆಸಿದರು.



ಈ ವೇಳೆ ಅವರು ಚಾಲ್ತಿಯಲ್ಲಿರುವ ಯೋಜನೆಗಳನ್ನು ವೇಗಗೊಳಿಸುವುದು ಹಾಗೂ ಭವಿಷ್ಯದ ಅಭಿವೃದ್ಧಿ ಯೋಜನೆಗಳನ್ನು ರೂಪಿಸುವ ಕುರಿತು ಅಧಿಕಾರಿಗಳೊಂದಿಗೆ ಸಮಗ್ರ ಚರ್ಚೆ ನಡೆಸಿ ಅಗತ್ಯ ಮಾರ್ಗದರ್ಶನ ನೀಡಿದರು.

ಆಯುಕ್ತರು ಮೊದಲು ಮಾವಿನಕೆರೆ ಪ್ರದೇಶಕ್ಕೆ ಭೇಟಿ ನೀಡಿ ಅಲ್ಲಿನ ಅಭಿವೃದ್ಧಿ ಕಾಮಗಾರಿಗಳನ್ನು ಪರಿಶೀಲಿಸಿದರು. ಸಾರ್ವಜನಿಕ ಸ್ಥಳಗಳಲ್ಲಿನ ಅತಿಕ್ರಮಣಗಳನ್ನು ತಕ್ಷಣವೇ ತೆರವುಗೊಳಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು. ಇದರ ಜೊತೆಗೆ ಮಾವಿನಕೆರೆಯ ಉದ್ಯಾನವನ ಅಭಿವೃದ್ಧಿ ಕಾಮಗಾರಿಯನ್ನು ನಿಗದಿತ ಗುಣಮಟ್ಟದೊಂದಿಗೆ ಶೀಘ್ರವಾಗಿ ಪೂರ್ಣಗೊಳಿಸುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಬಳಿಕ ಇಂದಿರಾ ನಗರದಲ್ಲಿ ನೂತನವಾಗಿ ನಿರ್ಮಿಸಲಾದ ಹೈಟೆಕ್ ಸಾರ್ವಜನಿಕ ಶೌಚಾಲಯಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ ಅವರು ಈ ಸೌಲಭ್ಯವನ್ನು ತ್ವರಿತವಾಗಿ ಪ್ರಾರಂಭಿಸುವ ಮೂಲಕ ಸ್ಥಳೀಯ ನಿವಾಸಿಗಳಿಗೆ ಲಭ್ಯವಾಗುವಂತೆ ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

ನಂತರ ಸ್ವಚ್ಚತಾ ಕಾರ್ಮಿಕರಿಗಾಗಿ ಮೀಸಲಿಟ್ಟಿರುವ ಸ್ಮಶಾನ ಸ್ಥಳದ ಅಭಿವೃದ್ಧಿ ಕಾಮಗಾರಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಅಲ್ಲಿ ಅಗತ್ಯವಿರುವ ಮೂಲಭೂತ ಸೌಲಭ್ಯಗಳನ್ನು ಒದಗಿಸುವ ಕುರಿತು ಚರ್ಚಿಸಿ, ಈ ನಿಟ್ಟಿನಲ್ಲಿ ಸೂಕ್ತ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಅಂತಿಮವಾಗಿ ಮಹಾತ್ಮ ಗಾಂಧಿ ನಗರ ವಿಕಾಸ ಯೋಜನೆ ಅಡಿಯಲ್ಲಿ ಪ್ರಸ್ತಾಪಿಸಲಾದ ಅಭಿವೃದ್ಧಿ ಕಾಮಗಾರಿಗಳ ವ್ಯಾಪ್ತಿಯಲ್ಲಿ ಹೊಸ ರಸ್ತೆಗಳ ನಿರ್ಮಾಣ ಮತ್ತು ಅಭಿವೃದ್ಧಿಗಾಗಿ ಸ್ಥಳ ಪರಿಶೀಲನೆ ನಡೆಸಿದರು. ಈ ಯೋಜನೆಯಡಿ ಕೈಗೊಳ್ಳಬೇಕಿರುವ ಕಾಮಗಾರಿಗಳಿಗಾಗಿ ಸಮಗ್ರ ಯೋಜನೆಯನ್ನು ರೂಪಿಸಿ ಬೇಗನೇ ಕಾರ್ಯಾರಂಭ ಮಾಡುವಂತೆ ಅಧಿಕಾರಿಗಳಿಗೆ ಮಾರ್ಗದರ್ಶನ ನೀಡಿದರು. ಅಲ್ಲದೆ ನಗರದ ಸಮಗ್ರ ಅಭಿವೃದ್ಧಿ, ಸೌಂದರ್ಯೀಕರಣ ಮತ್ತು ಜನರಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸುವ ನಿಟ್ಟಿನಲ್ಲಿ ಮಹಾನಗರ ಪಾಲಿಕೆ ಬದ್ಧವಾಗಿದೆ ಎಂದರು.

ಇದೇ ಸಂದರ್ಭದಲ್ಲಿ ಮಹಾನಗರ ಪಾಲಿಕೆಯ ಉಪ ಆಯುಕ್ತರಾದ ಭರತ್ ಕುಮಾರ್, ಕಂದಾಯ ವಿಭಾಗದ ಉಪ ಆಯುಕ್ತರಾದ ಬಿ.ಶರಣಪ್ಪ, ಪಾಲಿಕೆಯ ಕಾರ್ಯನಿರ್ವಾಹಕ ಅಭಿಯಂತರರು, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಸೇರಿದಂತೆ ವಿವಿಧ ವಿಭಾಗದ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರು ಇದ್ದರು.

# ರಾಜನಹಳ್ಳಿ ಶ್ರೀಗಳ ಆರೋಗ್ಯ ವಿಚಾರಿಸಿದ ಮಾಜಿ ಶಾಸಕ ತಿಪ್ಪರಾಜು ಹವಲ್ದಾರ್

ಜನವಾದಿ ವಾರ್ತೆ

ರಾಯಚೂರು ಫೆ 21– ರಾಜನಹಳ್ಳಿ ಶ್ರೀ ಮಹರ್ಷಿ ವಾಲ್ಮೀಕಿ ಗುರುಪೀಠದ ಪೀಠಾಧಿಪತಿ ಶ್ರೀ ಪ್ರಸನ್ನಾನಂದ ಪುರಿ ಮಹಾ ಸ್ವಾಮೀಜಿ ಅವರ ಆರೋಗ್ಯ ವಿಚಾರಿಸಲು ಮಾಜಿ ಶಾಸಕರಾದ ತಿಪ್ಪರಾಜು ಹವಲ್ದಾರ್ ರವರು ಹೈದರಾಬಾದ್‌ನ ಖಾಸಗಿ ಆಸ್ಪತ್ರೆಗೆ ಶನಿವಾರ ಭೇಟಿ ನೀಡಿದರು.



ಈ ಸಂದರ್ಭದಲ್ಲಿ ಮಾತನಾಡಿದ ಕೆ.ಶಿವನಗೌಡ ನಾಯಕ ಅವರು, ಪೂಜ್ಯ ಶ್ರೀಗಳಿಗೆ ಹೃದಯ ಸಂಬಂಧಿತ ಮೊದಲ ಹಂತದ ಶಸ್ತ್ರಚಿಕಿತ್ಸೆ ಯಶಸ್ವಿಯಾಗಿ ನೆರವೇರಿದ್ದು, ಚೇತರಿಸಿ ಕೊಳ್ಳುತ್ತಿದ್ದಾರೆ ಎಂದು ತಿಳಿಸಿದರು. ವೈದ್ಯರ ತಂಡವು ಸ್ವಾಮೀಜಿ ಯವರ ಆರೋಗ್ಯವನ್ನು ನಿಕಟವಾಗಿ ಗಮನಿಸುತ್ತಿದ್ದು, ಚಿಕಿತ್ಸೆಗೆ ಉತ್ತಮವಾಗಿ ಸ್ಪಂದಿಸುತ್ತಿದ್ದಾರೆ. ಕರ್ನಾಟಕದಾದ್ಯಂತ ಇರುವ ಭಕ್ತಾಧಿಗಳು ಯಾವುದೇ ರೀತಿಯ ಆತಂಕ ಪಡುವ ಅಗತ್ಯವಿಲ್ಲ ವೆಂದು ಸ್ಪಷ್ಟಪಡಿಸಿದರು.


ಪ್ರಸ್ತುತ ವೈದ್ಯರು ಸ್ವಾಮೀಜಿಯವರಿಗೆ ಸಂಪೂರ್ಣ ವಿಶ್ರಾಂತಿ ಅಗತ್ಯವಿದೆ ಎಂದು ಸೂಚಿಸಿದ್ದು, ಹಲವು ಕಟ್ಟುನಿಟ್ಟು ಅನುಸರಿಸಲಾಗುತ್ತಿದೆ ಭಕ್ತಾಧಿಗಳು ಆಸ್ಪತ್ರೆಗೆ ಭೇಟಿ ನೀಡುವ ಪ್ರಯತ್ನ ಮಾಡಬಾರದು. ವೈದ್ಯರ ಸಲಹೆಗಳನ್ನು ಗೌರವಿಸಿಸಬೇಕೆಂದು ತಿಳಿಸಿದರು.

# ಸರ್ಕಾರಿ ನೌಕರರು ವರ್ಗಾವಣೆ ಏಜೆಂಟ್‌ಗಳ ಹಾವಳಿಗೆ ಬಲಿಯಾಗಬಾರದು: ಸಿಎಂ ಸಿದ್ದರಾಮಯ್ಯ

ಬೆಂಗಳೂರು ಫೆ 21– ನೇಮಕಾತಿ ಹಾಗೂ ವರ್ಗಾವಣೆಗಳಲ್ಲಿ ಭ್ರಷ್ಟಾಚಾರವನ್ನು ತಡೆಯುವುದು ಸರ್ಕಾರದ ಆಶಯ. ವರ್ಗಾವಣೆ ಏಜೆಂಟ್‌ಗಳ ಹಾವಳಿ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ, ಸರ್ಕಾರಿ ನೌಕರರು ಇದಕ್ಕೆ ಬಲಿಯಾಗಬಾರದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕರೆ ನೀಡಿದರು.

ಅರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ ಶನಿವಾರ ಆಯೋಜಿಸಲಾಗಿದ್ದ ಅಭಯ ಹಸ್ತ ಅರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತದ ವೃಂದಗಳ ನೇಮಕಾತಿ ಆದೇಶಗಳ ವಿತರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು. ಎಲ್ಲ ವರ್ಗಾವಣೆಗಳನ್ನು ಕೌನ್ಸೆಲಿಂಗ್ ಮೂಲಕ ಮಾಡುತ್ತಿದ್ದು, ಭ್ರಷ್ಟಾಚಾರ ತಡೆಯಲು ಸಾಧ್ಯವಾಗುತ್ತಿದೆ. 5,700 ಹುದ್ದೆಗಳನ್ನು ವೈದ್ಯರು ಸೇರಿದಂತೆ ಕೌನ್ಸೆಲಿಂಗ್ ಮೂಲಕ ವರ್ಗಾವಣೆ ಮಾಡಲಾಗಿದೆ ಎಂದು ಸಿಎಂ ಸಿದ್ದರಾಮಯ್ಯ ತಿಳಿಸಿದರು.

# ನೀರಮಾನ್ವಿ ಗ್ರಾಮದಲ್ಲಿ ಅಕ್ರಮ ಕಲ್ಲು ಗಣಿಗಾರಿಕೆಯಿಂದ ಬೆಟ್ಟದೂರು ಮನೆಗಳಿಗೆ ಹಾನಿ: ಗುರುರಾಜ ನಾಗಲಪುರ್



ಜನವಾದಿ ವಾರ್ತೆ

ಮಾನ್ವಿ ಫೆ 21– ಪಟ್ಟಣದ ತಾಲೂಕು ಪಂಚಾಯಿತಿ ಆವರಣದಲ್ಲಿ ಸಾಮಾಜಿಕ ಹೋರಾಟಗಾರ ಗುರುರಾಜ ನಾಗಲಪುರ್ ನೇತೃತ್ವದಲ್ಲಿ ತಾಲೂಕಿನ ನೀರಮಾನ್ವಿ ಗ್ರಾಮದಲ್ಲಿ ಅಕ್ರಮ ಕಲ್ಲು ಗಣಿಗಾರಿಕೆ ನಡೆಸುತ್ತಿರುವ ಮೆ.ಸುಚೇತ ಮಿಲೇನಿಯಂ ಸಂಸ್ಥೆಯ ಮೇಲೆ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿ ಪ್ರತಿಭಟನೆ ನಡೆಸಿ ನೀರಮಾನ್ವಿ ಕಂದಾಯ ನಿರೀಕ್ಷಕರಾದ ಚರಣಸಿಂಗ್ ರವರಿಗೆ ಗುರುರಾಜ ನಾಗಲಪುರ್ ಮನವಿ ಸಲ್ಲಿಸಿ ಮಾತನಾಡಿ ತಾಲೂಕಿನ ನೀರಮಾನ್ವಿ ಗ್ರಾಮದ ಪಟ್ಟಾ ಜಮೀನಿನಲ್ಲಿ ರಸ್ತೆ ನಿರ್ಮಾಣಕ್ಕಾಗಿ ಮೆ.ಸುಚೇತ ಮಿಲೇನಿಯಂ ರವರು ನಿಯಮಬಾಹಿರವಾಗಿ ಹೆಚ್ಚುವಾ–ರಿಯಾಗಿ 3ಎಕರೆ ಪ್ರದೇಶದಲ್ಲಿ ಭಾರಿ ಯಂತ್ರಗಳನ್ನು ಬಳಸಿ ಕಲ್ಲು ಗಣಿಗಾರಿಕೆ ನಡೆಸಿದ್ದರಿಂದ ಹತ್ತಿರದ ಬೆಟ್ಟದುರು ಗ್ರಾಮದ ಮನೆಗಳಿಗೆ ಹಾನಿಯುಂಟಾಗಿರುತ್ತದೆ ಹಾಗೂ ಸರ್ಕಾರಕ್ಕೆ ಲಕ್ಷಾಂತರ ರಾಜಧನ ವಂಚನೆಯಾಗಿದ್ದು ಕೂಡಲೆ ಅಕ್ರಮ ಗಣಿಗಾರಿಕೆ ನಡೆಸುತ್ತಿರುವ ಮೆ.ಸುಚೇತ ಮಿಲೇನಿಯಂ ಸಂಸ್ಥೆಯ ಮೇಲೆ ಕ್ರಮ ಕೈಗೊಳ್ಳಬೇಕು ಹಾಗೂ ಹಾನಿಗೊಳಗಾದ ಮನೆಗಳಿಗೆ ಪರಿಹಾರ ನೀಡಬೇಕು ಎಂದು ಒತ್ತಾಯಿಸಿದರು.

ಮನವಿ ಸ್ವೀಕರಿಸಿ ನೀರಮಾನ್ವಿ ಕಂದಾಯ ನಿರೀಕ್ಷಕರಾದ ಚರಣಸಿಂಗ್ ಮಾತನಾಡಿ ಹಿರಿಯ ಭೂವಿಜ್ಞಾನಿಯವರ ಕಚೇರಿ ಗಣಿ ಮತ್ತು ಭೂವಿಜ್ಞಾನಗಳ ಇಲಾಖೆ ರಾಯಚೂರು ರವರು ನಿಯಮ ಉಲ್ಲಾಂಘಿಸಿರುವುದಕ್ಕಾಗಿ ಮೆ.ಸುಚೇತ ಮಿಲೇನಿಯಂ ಸಂಸ್ಥೆಯ ಮೇಲೆ ಅಗತ್ಯ ಕ್ರಮ ಕೈಗೊಂಡಿದ್ದು 73 ಲಕ್ಷ ದಂಡವನ್ನು ವಿಧಿಸಿ 30 ದಿನಗಳ ಕಾಲವಕಾಶವನ್ನು ನೀಡಿ ನೋಟಿಸ್ ನೀಡಿದ್ದಾರೆ ಎಂದು ತಿಳಿಸಿದರು.

ಪ್ರತಿಭಟನೆಯಲ್ಲಿ ಸಂಗನಬಸವ, ಕಿರಣ್ ಉದ್ಬಾಳ್, ಹೊಳೆಯಪ್ಪ, ಶಿವಕುಮಾರ್ ಕೆ., ಹುಸೇನಪ್ಪ ನಂದಿಹಾಳ್, ಶಿವಪುತ್ರ ಕುಪ್ಪೇಗುಡ್ಡ, ಈರಣ್ಣ ನಾಯಕ ಬುರಂಪುರ , ಬೆಟದೂರು ಮತ್ತು ನೀರಮಾನ್ವಿ ಗ್ರಾಮದವರು ಭಾಗವಹಿಸಿದರು

# ಪರಿಶಿಷ್ಟ ಪಂಗಡದ ಜಿಲ್ಲಾ ಪ್ರಧಾನ ಕಾರ್ಯದರ್ಶಿಯಾಗಿ ಚನ್ನಬಸವ ನಾಯಕ ಮ್ಯಾಕಲದೊಡ್ಡಿ ನೇಮಕ

ಜನವಾದಿ ವಾರ್ತೆ



ಜಾಲಹಳ್ಳಿ ಫೆ 21– ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಪರಿಶಿಷ್ಟ ಪಂಗಡ ವಿಭಾಗದ ರಾಯಚೂರು ಜಿಲ್ಲಾ ಪ್ರಧಾನ ಕಾರ್ಯದರ್ಶಿಯನ್ನಾಗಿ ಚನ್ನಬಸವ ನಾಯಕ ಮ್ಯಾಕಲದೊಡ್ಡಿ ಅವರನ್ನು ನೇಮಕ ಮಾಡಿ ಕಾಂಗ್ರೆಸ್ ಪಕ್ಷ ಆದೇಶ ಹೊರಡಿಸಿದೆ.

ಸಂಸದ ಜಿ. ಕುಮಾರ ನಾಯಕ, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಬಸವರಾಜ ಪಾಟೀಲ್ ಇಟಗಿ ಹಾಗೂ ಶ್ರೀದೇವಿ ನಾಯಕ ಅವರ ಶಿಫಾರಸ್ಸಿನ ಮೇರೆಗೆ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಜಿಲ್ಲಾಧ್ಯಕ್ಷ ಜಿ. ಮಲ್ಲಿಕಾರ್ಜುನ ನಾಯಕ ಅವರು ಶನಿವಾರ ನೇಮಕಾತಿ ಆದೇಶ ಪತ್ರ ನೀಡಿದ್ದಾರೆ.

ತಮಗೆ ನೀಡಲಾದ ಜವಾಬ್ದಾರಿಯನ್ನು ನಿಷ್ಠೆಯಿಂದ ರಾಜ್ಯ ಮತ್ತು ಜಿಲ್ಲಾ ಕಾಂಗ್ರೆಸ್ ಸಮಿತಿಯ ಮಾರ್ಗದರ್ಶನದಲ್ಲಿ ಹಾಗೂ ಕ್ಷೇತ್ರ ವ್ಯಾಪ್ತಿಯಲ್ಲಿರುವ ಎಲ್ಲಾ ಸ್ಥಳೀಯ ನಾಯಕರ ಸಹಕಾರದೊಂದಿಗೆ ಪಕ್ಷ ಸಂಘಟನೆ ಬಲಪಡಿಸಲು ಶ್ರಮಿಸುವಂತೆ ಆದೇಶ ಪತ್ರದಲ್ಲಿ ಸೂಚಿಸಲಾಗಿದೆ.

**ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ,ರಾಯಚೂರು**

**(ರಾಜೇಂದ್ರ ಗಂಜ್, ರಾಯಚೂರು–584102)**

ಕಛೇರಿ ದೂ.ವಾಣಿ: 235306E-Maill.Id-apmcraichur@rediffmail.com, apmcrcr@gmail.com

ಕ್ರ.ಸಂ:ಕೃ.ಉ.ಮಾ.ಸ.,ರಾ/ಸ್ವಸಿಟೆಂ.ಪ್ರ/1397 /2025–26 ದಿನಾಂಕಃ 20–02–2026

**ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ**

ಈ ಸಮಿತಿಗೆ 2025–26ನೇ ಸಾಲಿಗಾಗಿ ಕಾರ್ಯಾದೇಶ ನೀಡಿದ ದಿನಾಂಕದಿಂದ 11 ತಿಂಗಳವರೆಗೆ ರಾಯಚೂರು ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಮತ್ತು ಹತ್ತಿ ಮಾರುಕಟ್ಟೆ ಉಪ ಪ್ರಾಂಗಣಗಳಲ್ಲಿ ಈ ಕೆಳಕಾಣಿಸಿದ ಸ್ವಚ್ಛತಾ ಸಿಬ್ಬಂದಿಗಳ ಸೇವೆಗಾಗಿ ಕಾರ್ಮಿಕ ಇಲಾಖೆಯಲ್ಲಿ ನೋಂದಾಯಿಸಿದ ಅರ್ಹ ಏಜೆನ್ಸಿ ಗುತ್ತಿಗೆದಾರರಿಂದ ಇ–ಪ್ರೊಕ್ಯೂರಮೆಂಟ್ ಪೋರ್ಟಲ್ ಮೂಲಕ http://kppp.kar.gov.in ರ ಟೆಂಡರಗಳನ್ನು 2025–26ನೇ ಸಾಲಿಗೆ ಅನ್ವಯವಾಗುವ ಕಾರ್ಮಿಕ ಇಲಾಖೆಯ ಕನಿಷ್ಟ ವೇತನ ದರದಂತೆ ಆಹ್ವಾನಿಸಲಾಗಿದೆ.

1) ಇ–ಟೆಂಡರ್ ಅರ್ಜಿಗಳನ್ನು ಪಡೆಯುವ ದಿನಾಂಕ: 21–02–2026 ರಂದು ಬೆಳಿಗ್ಗೆ 11:00 ರಿಂದ 2) ಭರ್ತಿ ಮಾಡಿದ ಇ–ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 06–03–2026 ರಂದು ಸಾಯಂಕಾಲ 4:00 3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 09–03–2026 ರಂದು ಸಾಯಂಕಾಲ 4:00 4) ಆರ್ಥಿಕ ಬಿಡ್ ತೆರೆಯುವ ದಿನಾಂಕ:11–03–2026 ರಂದು ಸಾಯಂಕಾಲ 4:00.

**1) ಕೆಲಸದ ಹೆಸರು:** ಸ್ವಚ್ಛತಾ ಸಿಬ್ಬಂದಿಗಳು– 18 ಜನ. ಪೂರೈಸಬೇಕಾದ ಸಿಬ್ಬಂದಿಗಳ ಸಂಖ್ಯೆ: 18. ಭದ್ರತಾ ಠೇವಣಿ (ಇ.ಎಂ.ಡಿ): ರೂ.3,00,000/–. ಖಾಲಿ ಟೆಂಡರ್ ಫಾರಂ ಬೆಲೆ e-portal: ನಿಯಮಗಳನ್ವಯ. ವಿವರ: ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣ ಮತ್ತು ಹತ್ತಿ ಮಾರುಕಟ್ಟೆ ಪ್ರಾಂಗಣಗಳಲ್ಲಿ ಕಾರ್ಯನಿರ್ವಹಿಸಲು.

ಟೆಂಡರ್ ಪ್ರೋಸೆಸ್ಸಿಂಗ್ ಇ–ಪೂರ್ಟಲ್‌ನ ನಿಯಮಗಳನ್ವಯ ಇದ್ದು, ಟೆಂಡರ್ ಷರತ್ತುಗಳು ಹಾಗೂ ನಿಬಂಧನೆಗಳು ಇ–ಪೋರ್ಟಲ್‌ನಲ್ಲಿ ನಮೂದಿಸಿರುವಂತೆ ಇದ್ದು, ಹೆಚ್ಚಿನ ಮಾಹಿತಿಯನ್ನು ರಜಾ ದಿನಗಳನ್ನು ಹೊರತುಪಡಿಸಿ, ಕಛೇರಿ ವೇಳೆಯಲ್ಲಿ ಕಛೇರಿಯಿಂದ ಅಥವಾ http://kppp.karnataka.gov.in ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿದೆ

**ಸಹಿ/– ಅಧ್ಯಕ್ಷರು,**
**ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ರಾಯಚೂರು.**

**ಸಹಿ/– ಕಾರ್ಯದರ್ಶಿ,**
**ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ರಾಯಚೂರು.**

DIP/RCR/719/KSMCA/722/2025-26

## ಕೊಪ್ಪಳ ಜಿಲ್ಲಾ ಮಟ್ಟದ ಅಧಿಕಾರಿಗಳು ಹಾಗೂ ಸಾರ್ವಜನಿಕ ಮಾಹಿತಿ

# ಮಾಹಿತಿ ಆಯೋಗದ ಕಲಬುರಗಿ ಪೀಠದ ಆಯುಕ್ತ ಬಿ. ವೆಂಕಟ್ ಸಿಂಗ್

ಜನವಾದಿ ವಾರ್ತೆ

ರಾಯಚೂರು ಫೆ 21 – ಮಾಹಿತಿ ಹಕ್ಕು ಕಾಯ್ದೆ ಜನಪರ ಮತ್ತು ಪ್ರಬಲ ಕಾಯ್ದೆಯಾಗಿದ್ದು, ಪಾರದರ್ಶಕ ಆಡಳಿತ ವ್ಯವಸ್ಥೆಯನ್ನು ಜಾರಿಗೊಳಿಸುವಲ್ಲಿ ಪ್ರಮುಖವಾಗಿ ಕಾರ್ಯನಿರ್ವಹಿಸುತ್ತದೆ. ಸಾರ್ವಜನಿಕ ಸೇವೆಯಲ್ಲಿರುವವರಿಗೆ ಮಾಹಿತಿ ಹಕ್ಕು ಕಾಯ್ದೆಯು ರಕ್ಷಣೆಯೂ ಹೌದು, ಎಚ್ಚರಿಕೆಯೂ ಹೌದು ಎಂದು ಕರ್ನಾಟಕ ರಾಜ್ಯ ಮಾಹಿತಿ ಆಯೋಗದ ಕಲಬುರಗಿ ಪೀಠದ ರಾಜ್ಯ ಮಾಹಿತಿ ಆಯುಕ್ತರಾದ ಬಿ. ವೆಂಕಟ್ ಸಿಂಗ್ ಹೇಳಿದರು.



ಕೊಪ್ಪಳ ಜಿಲ್ಲಾಡಳಿತ ಭವನದ ಆಡಿಟೋರಿಯಂ ಹಾಲನಲ್ಲಿ ಫೆ.21ರಂದು ಕೊಪ್ಪಳ ಜಿಲ್ಲೆಯ ಎಲ್ಲಾ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಹಾಗೂ ಸಾರ್ವಜನಿಕ ಮಾಹಿತಿ ಅಧಿಕಾರಿಗಳಿಗೆ ಮಾಹಿತಿ ಹಕ್ಕು ಕಾಯ್ದೆಯ ಕುರಿತು ಹಮ್ಮಿಕೊಂಡಿದ್ದ ಕಾರ್ಯಾಗಾರ ಹಾಗೂ ಸಂವಾದ ಕಾರ್ಯಕ್ರಮದ ಉದ್ಘಾಟನೆ ನೆರವೇರಿಸಿ ಅವರು ಮಾತನಾಡಿದರು.

ಮಾಹಿತಿ ಹಕ್ಕು ಕಾಯ್ದೆಯ ಮುಖ್ಯ ಉದ್ದೇಶ ಸರ್ಕಾರದ ಆಡಳಿತದಲ್ಲಿ ಸಾರ್ವಜನಿಕರು ಭಾಗವಹಿಸುವುದಾಗಿದೆ. ಸರಕಾರದ ಯೋಜನೆ ಕುರಿತು ಸಾರ್ವಜನಿಕರು ಮಾಹಿತಿ ಪಡೆಯಲು ಈ ಕಾಯ್ದೆಯಡಿ ಅವಕಾಶವಿದೆ. ಇದರಿಂದ ಜನರಿಗೆ ಸರ್ಕಾರದ ಯೋಜನೆಗಳ ಮಾಹಿತಿ ತಿಳಿಯುವುದರ ಜೊತೆಗೆ ಆಡಳಿತದಲ್ಲಿ ಪಾರದರ್ಶಕತೆ ತರಬಹುದಾಗಿದೆ. ಈ ಕಾಯ್ದೆ ಬಂದು 20 ವರ್ಷಗಳಾದರೂ ಬಹಳಷ್ಟು ಅಧಿಕಾರಿಗಳಿಗೆ ಕಾಯ್ದೆ ಅನುಷ್ಠಾನದಲ್ಲಿ ಮಾಹಿತಿ ಕೊರತೆ ಇದೆ. ಹಾಗಾಗಿ ಜಿಲ್ಲಾ ಮತ್ತು ತಾಲ್ಲೂಕು ಹಾಗೂ ಗ್ರಾಮ ಪಂಚಾಯತಿ ಮಟ್ಟದ ಅಧಿಕಾರಿಗಳಿಗೆ ಮಾಹಿತಿ ಹಕ್ಕು ಕಾಯ್ದೆ ಕುರಿತ ಪುಸ್ತಕವನ್ನು ಎಲ್ಲರಿಗೂ ತಲುಪಿಸುವ ಕೆಲಸ ಮಾಡಬೇಕು ಎಂದು ಹೇಳಿದರು.

ಕಲ್ಬುರ್ಗಿ ಪೀಠ ಆರಂಭವಾದ ಬಳಿಕ 16640 ಪ್ರಕರಣ ದಾಖಲಾಗಿ ಇಲ್ಲಿಯವರೆಗೆ 10,423 ಪ್ರಕರಣಗಳನ್ನು ವಿಲೇವಾರಿ ಮಾಡಲಾಗಿದೆ. ತಾವು ಈ ಕಲಬುರಗಿ ಪೀಠದ ಮಾಹಿತಿ ಆಯುಕ್ತರಾಗಿ ಅಧಿಕಾರ ಸ್ವೀಕರಿಸಿದ 3 ತಿಂಗಳ ಅವಧಿಯಲ್ಲಿ 1,400 ಪ್ರಕರಣಗಳನ್ನು ವಿಚಾರಣೆ ಮಾಡಿ 605 ಪ್ರಕರಣಗಳನ್ನು ವಿಲೇವಾರಿ ಮಾಡಿದ್ದು, 6,655 ಪ್ರಕರಣಗಳು ಇನ್ನೂ ವಿಲೇವಾರಿಗೆ ಬಾಕಿ ಇದ್ದು, ಆದ್ಯತೆ ಮೇರೆಗೆ ಸೋಮವಾರದಿಂದ ಶುಕ್ರವಾರ ರ್ಜಿಗಳನ್ನು ವಿಲೇವಾರಿ ಮಾಡಲಾಗುತ್ತಿದೆ ಎಂದು ಅವರು ತಿಳಿಸಿದರು.

ಕೊಪ್ಪಳ ಜಿಲ್ಲೆಯಲ್ಲಿ 764 ಪ್ರಕರಣಗಳು ಬಾಕಿ ಇವೆ. ಕಲ್ಯಾಣ ಕರ್ನಾಟಕದ ಜಿಲ್ಲೆಗಳಲ್ಲಿ ರಾಯಚೂರು ಜಿಲ್ಲೆಯಲ್ಲಿ ಅತಿ ಹೆಚ್ಚು ಮತ್ತು ಬೀದರ ಜಿಲ್ಲೆಯಲ್ಲಿ ಅತಿ ಕಡಿಮೆ ಪ್ರಕರಣಗಳು ಇವೆ. ಇದುವರೆಗೂ ದ್ವಿತೀಯ ಮೇಲ್ಮನವಿ ವಿಚಾರಣೆಗೆ ಅರ್ಜಿದಾರರು ಹಾಗೂ ಅಧಿಕಾರಿಗಳು ಬೆಂಗಳೂರಿಗೆ ಹೋಗಬೇಕಿತ್ತು. ಆದರೆ ಫೆಬ್ರವರಿಯಿಂದ ಆಯೋಗದ ಕಲಬುರಗಿ ಪೀಠದಲ್ಲಿ ದ್ವಿತೀಯ ಮೇಲ್ಮನವಿ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದ್ದು, ಕಲ್ಯಾಣ ಕರ್ನಾಟಕದ ಎಲ್ಲ 7 ಜಿಲ್ಲೆಗಳ ಜನರಿಗೆ ಇದರಿಂದ ಅನುಕೂಲವಾಗಲಿದೆ ಎಂದು ಅವರು ಹೇಳಿದರು.

ಕರ್ನಾಟಕ ರಾಜ್ಯ ಮಾಹಿತಿ ಆಯೋಗ ಬೆಂಗಳೂರು ಪೀಠದ ರಾಜ್ಯ ಮಾಹಿತಿ ಆಯುಕ್ತರಾದ ಡಾ. ಹರೀಶಕುಮಾರ ಅವರು ಮಾತನಾಡಿ, ಮಾಹಿತಿ ಹಕ್ಕು ಕಾಯ್ದೆಯು ಸ್ವತಂತ್ರ ಭಾರತದಲ್ಲಿ ಅತ್ಯಂತ ಕ್ರಾಂತಿಕಾರಕ ಕಾಯ್ದೆಯಾಗಿದೆ. ಸರ್ಕಾರದ ಯೋಜನೆಗಳು, ಸೌಲಭ್ಯಗಳ ಹಿತಾಸಕ್ತಿಗೆ ಸಂಬಂಧಿಸಿದಂತೆ ಮಾಹಿತಿ ಪಡೆಯುವುದು ದೇಶದ ಪ್ರತಿಯೊಬ್ಬ ಪ್ರಜೆಗಳ ಮೂಲಭೂತ ಹಕ್ಕಾಗಿದೆ. ದೇಶದ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗ ವ್ಯವಸ್ಥೆ ದಾರಿತಪ್ಪಿದಾಗ ಅಂತಿಮ ನಿರ್ಣಾಯಕರು ಜನರೇ ಆಗಿರುತ್ತಾರೆ. ಜನರಿಗಾಗಿ ತಂದ ಕಾಯ್ದೆ, ಕಾನೂನುಗಳ ಪಾಲಕರು ಅವರೇ ಆಗಿದ್ದಾರೆ. ಪ್ರಜಾಪ್ರಭುತ್ವ ಪ್ರಬಲವಾಗಬೇಕು. ಜನರಿಗೆ ಸರ್ಕಾರದ ಮಾಹಿತಿ ಲಭ್ಯವಾಗಬೇಕು ಎಂಬ ಉದ್ದೇಶದಿಂದ ನಮ್ಮ ದೇಶದಲ್ಲಿ 2005ರ ಅಕ್ಟೋಬರ್ 5 ರಂದು ಜಾರಿಗೆ ಬಂದ ಆರ್.ಟಿ.ಐ ಕಾಯ್ದೆಯನ್ನು ಅನುಷ್ಠಾನಗೊಳಿಸಿದ ಮೊಟ್ಟ ಮೊದಲ ರಾಜ್ಯ ನಮ್ಮ ಕರ್ನಾಟಕವಾಗಿದೆ ಎಂದರು.

ಮಾಹಿತಿ ಹಕ್ಕು ಕಾಯ್ದೆಯ ಬಗ್ಗೆ ಅಧಿಕಾರಿಗಳಲ್ಲಿ ಭಯದ ವಾತಾವರಣವಿದ್ದು, ಭಯ ಪಡುವ ಅವಶ್ಯಕತೆ ಇಲ್ಲ. ಈ ಕಾಯ್ದೆಯು ಬಹಳ ಸುಲಭ ಮತ್ತು ಸಂಕೀರ್ಣವಾಗಿದೆ. ಮೊದಲು ಅಧಿಕಾರಿಗಳಲ್ಲಿ ಆರ್.ಟಿ.ಐ ಕುರಿತು ಸ್ಪಷ್ಟ ಅರಿವಿರಬೇಕು. ಇದರ ಬಗ್ಗೆ ಯಾವುದೇ ಅಲಕ್ಷ್ಯ ಬೇಡ. ಸಾರ್ವಜನಿಕ ಮಾಹಿತಿ ಅಧಿಕಾರಿಗಳು ನಿಗದಿತ ಕಾಲವಧಿಯೊಳಗೆ ಸಾರ್ವಜನಿಕರಿಗೆ ಮಾಹಿತಿ ನೀಡಲು ಕ್ರಮ ವಹಿಸಬೇಕು. ಆರ್.ಟಿ.ಐ ಅಡಿ ಸ್ವೀಕೃತವಾಗುವ ಅರ್ಜಿಗಳ ಪೈಕಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಕಂದಾಯ ಮತ್ತು ಲೋಕೋಪಯೋಗಿ ಇಲಾಖೆಗಳ ಅರ್ಜಿಗಳೇ ಹೆಚ್ಚಾಗಿವೆ. ಇದರಲ್ಲಿ ಶೇ.30 ರಷ್ಟು ಅರ್ಜಿಗಳು ಗ್ರಾಮ ಪಂಚಾಯಿತಿಗಳಿಗೆ ಸಂಬಂಧಿಸಿದ ಮಾಹಿತಿ ಒಳಗೊಂಡಿವೆ. ಇತ್ತೀಚಿಗೆ ಪೊಲೀಸ್ ಇಲಾಖೆಯಲ್ಲಿಯೂ ಅರ್ಜಿಗಳು ಸ್ವೀಕೃತವಾಗುತ್ತಿದ್ದು, ಮಾನವ ಹಕ್ಕುಗಳ ಉಲ್ಲಂಘನೆ ಸಂದರ್ಭದಲ್ಲಿ 24 ಗಂಟೆಯೊಳಗೆ ಮಾಹಿತಿ ನೀಡಬೇಕು. ಕಾಯ್ದೆಯನ್ನು ಸಮರ್ಪಕವಾಗಿ ಅನುಷ್ಠಾನ ಮಾಡುವ ಮೂಲಕ ದೇಶದ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಮತ್ತಷ್ಟು ಗಟ್ಟಿಗೊಳಿಸಲು ಎಲ್ಲಾ ಅಧಿಕಾರಿಗಳು ಶ್ರಮಿಸಬೇಕು ಎಂದು ಹೇಳಿದರು.

ಕರ್ನಾಟಕ ರಾಜ್ಯ ಮಾಹಿತಿ ಆಯೋಗ ಬೆಂಗಳೂರು ಪೀಠದ ರಾಜ್ಯ ಮಾಹಿತಿ ಆಯುಕ್ತರಾದ ಬದ್ರುದ್ದೀನ್ ಕೆ. ಅವರು ಮಾತನಾಡಿ, ಅಧಿಕಾರಿಗಳು ತಮ್ಮ ಸೇವಾವಧಿಯಲ್ಲಿ ಮಾಹಿತಿ ಹಕ್ಕು ಕಾಯ್ದೆಯನ್ನು ಸಮರ್ಪಕವಾಗಿ ನಿರ್ವಹಿಸಿದರೆ ಅದು ನಿವೃತ್ತಿ ನಂತರವೂ ನಿಮ್ಮ ಸಹಾಯಕ್ಕೆ ಬರುತ್ತದೆ. ಅಧಿಕಾರಿಗಳು ಆತ್ಮವಿಶ್ವಾಸದಿಂದಿರಬೇಕು. ಪಾರದರ್ಶಕ ಆಡಳಿತವಿದ್ದಾಗ ಆತ್ಮವಿಶ್ವಾಸ ಸಹಜವಾಗಿಯೇ ಬರುತ್ತದೆ. ಮಾಹಿತಿ ಹಕ್ಕು ಕಾಯ್ದೆಯನ್ನು ಸರಿಯಾಗಿ ಅರ್ಥೈಸಿಕೊಳ್ಳಿ. ಕೊಡಬಹುದಾದ ಹಾಗೂ ಕೊಡಲಾಗದ ಮಾಹಿತಿ ಯಾವುದು ಎಂಬುದನ್ನು ತಿಳಿದುಕೊಳ್ಳಿ. ಅರ್ಜಿ ಬಂದ ಕೂಡಲೇ ಗಾಬರಿಯಾಗುವ ಬದಲು ಅರ್ಜಿಯಲ್ಲಿನ ಮಾಹಿತಿ ನಿಮ್ಮಲ್ಲಿ ಲಭ್ಯವಿದೆಯೋ ಇಲ್ಲವೋ ಎಂಬುದನ್ನು ಪರಿಶೀಲಿಸಿ ಸೂಕ್ತ ಮಾಹಿತಿ ಅಥವಾ ಹಿಂಬರಹವನ್ನು ನೀಡಿ. ಮಾಹಿತಿ ನೀಡಲು 30 ದಿನಗಳ ಅವಧಿಯನ್ನು ನಿಗದಿಪಡಿಸಲಾಗಿದ್ದು, ಕೊನೆಯ ದಿನದವರೆಗೂ ಕಾಯದೆ, ಅರ್ಜಿಗಳನ್ನು ಬೇಗ ವಿಲೇವಾರಿ ಮಾಡಿ. ಇದರಿಂದ ಅನಗತ್ಯ ಒತ್ತಡ ತಪ್ಪುತ್ತದೆ. ಮಾಹಿತಿ ಹಕ್ಕಿಗೆ ಸಂಬಂಧಿಸಿದ ಯಾವುದೇ ಮಾಹಿತಿ ಅಥವಾ ವಿಷಯವನ್ನು ದಾಖಲೆ ಅಥವಾ ಪತ್ರ ಮುಖೇನ ನೀಡಿ. ಎಲ್ಲ ಇಲಾಖೆಗಳ ಸರ್ವಜನಿಕ ಮಾಹಿತಿ ಅಧಿಕಾರಿಗಳು ಇಲಾಖೆಗೆ ಸಂಬಂಧಿಸಿದ ಮಾಹಿತಿಯನ್ನು ಕಾಯ್ದೆಯ 4(1)(ಎ) ಮತ್ತು 4(1)(ಬಿ)ಯಲ್ಲಿ ವಿಂಗಡಿಸಿ, ಇಲಾಖೆಯ ವೆಬ್‌ಸೈಟಗೆ ಅಪ್ಲೋಡ್ ಮಾಡಿ. ಇದರಿಂದ ಶೇ.80 ರಷ್ಟು ಕೆಲಸ ಹಾಗೂ ಒತ್ತಡ ಕಡಿಮೆಯಾಗುತ್ತದೆ. ಮಾಹಿತಿ ಹಕ್ಕಿಗೆ ಸಂಬಂಧಿಸಿದ ಅರ್ಜಿ ಕುರಿತು ಯಾವುದೇ ಅಲಕ್ಷ್ಯ ಅಥವಾ ಅನಗತ್ಯ ವಿಳಂಬ ಮಾಡಬೇಡಿ. ಇಲಾಖೆಗಳ ಮೇಲಧಿಕಾರಿಗಳು ಪ್ರತಿ ಮೂರು ತಿಂಗಳಿಗೊಮ್ಮೆ ಅಧೀನ ಕಚೇರಿಯ ಪರಿಶೀಲನೆ ನಡೆಸಿ, ಯಾವುದೇ ಅರ್ಜಿ ಬಾಕಿ ಇರದಂತೆ ಖಚಿತಪಡಿಸಿಕೊಳ್ಳಿ ಎಂದು ಅವರು ಹೇಳಿದರು.

ಜಿಲ್ಲಾಧಿಕಾರಿ ಡಾ. ಸುರೇಶ ಬಿ. ಇಟ್ನಾಳ ಅವರು ಮಾತನಾಡಿ, ಮಾಹಿತಿ ಹಕ್ಕು ಕಾಯ್ದೆಯಿಂದ ಆಡಳಿತದಲ್ಲಿ ಪಾರದರ್ಶಕತೆ ಬರುವುದರ ಜೊತೆಗೆ ವ್ಯವಸ್ಥೆಯಲ್ಲಿನ ಲೋಪ–ದೋಷಗಳನ್ನು ಸರಿಪಡಿಸಲು ಅನುಕೂಲವಾಗಿದೆ. ಅಧಿಕಾರಿಗಳು ಮಾಹಿತಿ ಹಕ್ಕಿನ ಕುರಿತು ಸರಿಯಾಗಿ ತಿಳಿದುಕೊಳ್ಳಬೇಕು. ತಮಗೆ ಮಾಹಿತಿ ಕೊರತೆ ಇದ್ದರೆ ಈ ಕುರಿತು ಮಾಹಿತಿ ಒಳಗೊಂಡ ಪುಸ್ತಕಗಳನ್ನು ಖರೀದಿಸಿಕೊಂಡು ಓದಿ ತಿಳಿದುಕೊಳ್ಳಬೇಕು. ತಮ್ಮ ಕಛೇರಿಯಲ್ಲಿ ಮಾಹಿತಿ ಹಕ್ಕಿಗೆ ಸಂಬಂಧಿಸಿದ ಯಾವುದೇ ಅರ್ಜಿಗಳು ಬಂದಿದ್ದರೆ ಅವುಗಳನ್ನು ಆದಷ್ಟು ಬೇಗನೆ ವಿಲೇವಾರಿ ಮಾಡಬೇಕು. ಎಲ್ಲಾ ಕಛೇರಿಗಳಲ್ಲಿ ಸಾರ್ವಜನಿಕ ಮಾಹಿತಿ ಅಧಿಕಾರಿ ಮತ್ತು ಪ್ರಥಮ ಮೇಲ್ಮನವಿ ಪ್ರಾಧಿಕಾರಿ ಯಾರು ಎನ್ನುವ ಕುರಿತು ಬೋರ್ಡಗಳನ್ನು ತಮ್ಮ ಕಚೇರಿಗಳಲ್ಲಿ ಕಡ್ಡಾಯವಾಗಿ ಹಾಕಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ವರ್ಣಿತ್ ನೇಗಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ರಾಮ್ ಎಲ್. ಅರಸಿದ್ಧಿ, ಅಪರ ಜಿಲ್ಲಾಧಿಕಾರಿ ಸಿದ್ರಾಮೇಶ್ವರ, ಜಿ.ಪಂ ಉಪಕಾರ್ಯದರ್ಶಿ ಟಿ.ಕೃಷ್ಣಮೂರ್ತಿ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಕರ್ನಾಟಕ ರಾಜ್ಯ ಮಾಹಿತಿ ಆಯೋಗದ ರಾಜ್ಯ ಮಾಹಿತಿ ಆಯುಕ್ತರು ಸಾರ್ವಜನಿಕ ಮಾಹಿತಿ ಅಧಿಕಾರಿಗಳೊಂದಿಗೆ ಮಾಹಿತಿ ಹಕ್ಕು ಕಾಯ್ದೆಯ ಕುರಿತು ಸಂವಾದ ನಡೆಸಿದರು. ಜಿಲ್ಲಾ ತರಬೇತಿ ಸಂಸ್ಥೆಯ ಪ್ರಾಚಾರ್ಯರಾದ ಕೃಷ್ಣಮೂರ್ತಿ ದೇಸಾಯಿ ಅವರು ಕಾರ್ಯಕ್ರಮ ನಿರೂಪಿಸಿದರು. ಕಾರ್ಯಾಗಾರದಲ್ಲಿ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಹಾಗೂ ಸಾರ್ವಜನಿಕ ಮಾಹಿತಿ ಅಧಿಕಾರಿಗಳು ಭಾಗವಹಿಸಿದ್ದರು.

## ಅಂತರರಾಷ್ಟ್ರೀಯ ಮಾತೃಭಾಷೆ ದಿನ ಕಾರ್ಯಕ್ರಮ



ಜನವಾದಿ ವಾರ್ತೆ

ಮಾನ್ವಿ ಫೆ 21– ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಪದವಿ ಕಾಲೇಜು ಆವರಣದಲ್ಲಿ ಆಂತರಿಕ ಗುಣಮಟ್ಟ ಭರವಸಾ ಕೋಶ ಮತ್ತು ಆಂಗ್ಲ ಭಾಷಾ ವಿಭಾಗದ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡ ಅಂತರರಾಷ್ಟ್ರೀಯ ಮಾತೃಭಾಷೆ ದಿನ ಕಾರ್ಯಕ್ರಮವನ್ನು ಉದ್ಘಾಟಿಸಿ ಕಾಲೇಜಿನ ಪ್ರಾಚಾರ್ಯರಾದ ಜೆ.ಎಲ್. ಈರಣ್ಣ ಮಾತನಾಡಿ ವಿಶ್ವದಲ್ಲಿನ ಜನರು ವ್ಯಾವಹರಿಕವಾಗಿ ಬಹು ಭಾಷೆಗಳನ್ನು ಮಾತನಾಡುತ್ತಿದ್ದರು ಕೂಡ ತಮ್ಮ ಮಾತೃಭಾಷೆಗೆ ಹೆಚ್ಚಿನ ಗೌರವವನ್ನು ನೀಡುತ್ತಾರೆ ಮಾತೃಭಾಷೆಯಲ್ಲಿ ಮಗುವಿಗೆ ಶಿಕ್ಷಣವನ್ನು ನೀಡಿದಾಗ ಮಾತ್ರ ಮಗುವಿನ ಸರ್ವತೋಮುಖ ಅಭಿವೃದ್ಧಿ ಸಾಧ್ಯವಾಗುತ್ತದೆ ಅದ್ದರಿಂದ ಪ್ರತಿಯೊಬ್ಬರು ಕೂಡ ಮಾತೃಭಾಷೆಗೆ ಹೆಚ್ಚಿನ ಗೌರವ ಅಭಿಮಾನವನ್ನು ಸಲ್ಲಿಸಬೇಕು ನಮ್ಮೆಲ್ಲರ ಮಾತೃಭಾಷೆಯಾಗಿರುವ ಕನ್ನಡ ಭಾಷೆಗೆ ಹೆಚ್ಚಿನ ಅದ್ಯತೆಯನ್ನು ನೀಡಬೇಕು ಪ್ರೀತಿ ಗೌರವ ಅಭಿಮಾನ ಬೆಳೆಸಿಕೊಳ್ಳಬೇಕು ನಮ್ಮ ಮಾತೃಭಾಷೆ ಕನ್ನಡ ಉಳಿಸಿ ಬೆಳೆಸುವುದಕ್ಕೆ ನಾವೆಲ್ಲರೂ ಕನ್ನಡದಲ್ಲಿ ಮಾತನಾಡುವುದು ಅಗತ್ಯ ಎಂದು ತಿಳಿಸಿದರು.

ಕಾಲೇಜಿನ ಆಂಗ್ಲ ಭಾಷಾ ವಿಭಾಗದ ಮುಖ್ಯಸ್ಥರಾದ ಸೈಯದ್ ಮುಜೀಬ್ ಅಹ್ಮದ್ ಮಾತನಾಡಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಪ್ರತಿ ಭಾಷೆಯ ಉಳಿವು ಬಹುಮುಖ್ಯ, 1952 ರಲ್ಲಿ ಬಾಂಗ್ಲಾದೇಶದಲ್ಲಿ ಬಂಗಾಳಿ ಭಾಷೆಗಾಗಿ ನಡೆದ ಹೋರಾಟವನ್ನು ಗುರುತಿಸಿ ಯುನೆಸ್ಕೋ ಫೆಬ್ರವರಿ 21 ರಂದು ಅಂತರರಾಷ್ಟ್ರೀಯ ಮಾತೃಭಾಷೆ ದಿನ ಎಂದು 1999 ರಲ್ಲಿ ಘೋಷಿಸಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಧ್ಯಾಪಕರಾದ ಸೈಯದ್ ಮಿನ್ಹಾಜ ಉಲ್ ಹಸನ್, ರವಿ.ಎಂ., ಚನ್ನಬಸವ ಮಾಡಗಿರಿ, ಶಶಿಧರ್, ಚನ್ನಬಸಪ್ಪ, ಕನ್ನಡ ವಿಭಾಗದ ಬಸವರಾಜ ಸುಂಕೇಶ್ವರ, ಇತಿಹಾಸ ವಿಭಾಗದ ಮಲ್ಲಿಕಾರ್ಜುನ ಮಡಿವಾಳ ಸೇರಿದಂತೆ ಕಾಲೇಜಿನ ಉಪನ್ಯಾಸಕರು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದರು.

## 5 ಲಕ್ಷ ರೂ. ಲಂಚ ಪಡೆಯುವಾಗ ಸಿಕ್ಕಿಬಿದ್ದ ಬಿಜೆಪಿ ಶಾಸಕ ಅರೆಸ್ಟ್

ಗದಗ ಫೆ 21– ಕಾಮಗಾರಿ ಗುತ್ತಿಗೆ ನೀಡಲು 5 ಲಕ್ಷ ರೂ. ಲಂಚ ಸ್ವೀಕ–ರಿಸಿದ ಆರೋಪದ ಮೇಲೆ ಶಿರಹಟ್ಟಿಯ ಬಿಜೆಪಿ ಶಾಸಕ ಡಾ. ಚಂದ್ರು ಲಮಾಣಿ ಮತ್ತು ಇಬ್ಬರು ಆಪ್ತ ಸಹಾಯಕರನ್ನು ಲೋಕಾಯುಕ್ತ ಪೊಲೀಸರು ನಡೆಸಿದ ಕಾರ್ಯಾಚರಣೆ ವೇಳೆ ಬಂಧಿಸಲಾಗಿದೆ.

ಶಾಸಕ ಚಂದ್ರು ಲಮಾಣಿಗೆ ಸೇರಿದ ಲಕ್ಷ್ಮೇಶ್ವರ ಪಟ್ಟಣದಲ್ಲಿರುವ ಬಾಲಾಜಿ ಆಸ್ಪತ್ರೆ ಮೇಲೆ ಧಾರವಾಡ ಲೋಕಾಯುಕ್ತ ಎಸ್ಪಿ ಸಿದ್ದಲಿಂಗಪ್ಪ ತಂಡ ಟ್ರಾಪ್ ಕಾರ್ಯಾಚರಣೆ ನಡೆಸಿದೆ.ಈ ವೇಳೆ ಶಾಸಕ ಚಂದ್ರು ಲಮಾಣಿ, ಅವರ ಸರ್ಕಾರಿ ಪಿಎ ಮಂಜುನಾಥ ವಾಲ್ಮೀಕಿ, ಹಾಗೂ ಖಾಸಗಿ ಪಿಎ ಗುರು ಲಮಾಣಿ ಬಲೆಗೆ ಬಿದ್ದಿದ್ದಾರೆ. ರಸ್ತೆ ಬದಿ ತಡೆಗೋಡೆ ನಿರ್ಮಾಣ ಸಂಬಂಧ 1 ಕೋಟಿ ಮೊತ್ತದ ಕಾಮಗಾರಿಗೆ ಶಾಸಕರು ಕ್ಲಾಸ್–1 ಗುತ್ತಿಗೆದಾರ ವಿಜಯ ಪೂಜಾರ ಎನ್ನುವವರ ಬಳಿ 11 ಲಕ್ಷ ರೂ.ಗೆ ಬೇಡಿಕೆಯಿಟ್ಟಿದ್ದರು ಇದರ ಮೊದಲ ಕಂತಿನ ಹಣವಾಗಿ 5 ಲಕ್ಷ ರೂ. ಪಡೆಯುವಾಗಲೇ ಧಾರವಾಡ ಲೋಕಾಯುಕ್ತ ಎಸ್ಪಿ ಸಿದ್ದಲಿಂಗಪ್ಪ ನೇತೃತ್ವದ ತಂಡ ದಾಳಿ ನಡೆಸಿದೆ. ಶಾಸಕರು ಹಾಗು ಇಬ್ಬರು ಪಿಎಗಳನ್ನು ಲೋಕಾಯುಕ್ತ ಕಚೇರಿ ಕರೆದುಕೊಂಡು ಹೋಗಿ ವಿಚಾರಣೆ ನಡೆಸಲಾಗುತ್ತಿದೆ.

# ಅಂತಾರಾಷ್ಟ್ರೀಯ ಮಟ್ಟದಲ್ಲಿ ಹೆಸರಾಗಿದೆ ಜಿಕೆವಿಕೆ ಬಿತ್ತನೆ ಬೀಜ ಪ್ರಯೋಗಾಲಯ

ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಗಾಂಧಿ ಕೃಷಿ ವಿಜ್ಞಾನ ಕೇಂದ್ರದ ಕೃಷಿ ಕಾಲೇಜಿನ ಸಸ್ಯರೋಗ ವಿಜ್ಞಾನ ವಿಭಾಗದಲ್ಲಿ 2022ರಲ್ಲಿ ಸ್ಥಾಪಿಸಲಾದ 'ಬೀಜ ಆರೋಗ್ಯ ತಪಾಸಣಾ ಪ್ರಯೋಗಾಲಯ'ವು ಬಿತ್ತನೆ ಬೀಜಗಳ ಕುರಿತು ಆಣ್ವಿಕ ಮಟ್ಟದಲ್ಲಿ ಸಂಶೋಧನೆ ನಡೆಸಿ ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ವಿಜ್ಞಾನಿಗಳ ಗಮನ ಸೆಳೆದಿದೆ.



'ಬೆಳೆಯುವ ಪೈರು ಮೊಳಕೆಯಲ್ಲಿ' ಎಂಬ ಗಾದೆಯಿದೆ. ಇದನ್ನೇ ಆಧುನಿಕತೆಗೆ ತಕ್ಕಂತೆ ಬದಲಾಯಿಸಿದರೆ, 'ಬೆಳೆಯುವ ಪೈರು ಬೀಜದಲ್ಲಿ' ಅಥವಾ ಮತ್ತೂ ಮುಂದುವರೆದು 'ಬೆಳೆಯುವ ಪೈರು ಬೀಜದ ವಂಶವಾಹಿಯಲ್ಲಿ' ಎಂದು ವಿಶ್ಲೇಷಿಸಬೇಕಾದ ಕಾಲವಿದು.

ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಗಾಂಧಿ ಕೃಷಿ ವಿಜ್ಞಾನ ಕೇಂದ್ರದ ಕೃಷಿ ಕಾಲೇಜಿನ ಸಸ್ಯರೋಗ ವಿಜ್ಞಾನ ವಿಭಾಗದಲ್ಲಿ 2022ರಲ್ಲಿ ಸ್ಥಾಪಿಸಲಾದ 'ಬೀಜ ಆರೋಗ್ಯ ತಪಾಸಣಾ ಪ್ರಯೋಗಾಲಯ'ವು ಬಿತ್ತನೆ ಬೀಜಗಳ ಕುರಿತು ಆಣ್ವಿಕ ಮಟ್ಟದಲ್ಲಿ ಸಂಶೋಧನೆ ನಡೆಸಿ ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ವಿಜ್ಞಾನಿಗಳ ಗಮನ ಸೆಳೆದಿದೆ. ರೈತ ಸಮುದಾಯಕ್ಕೆ ಮಹದುಪಕಾರವನ್ನು ಮಾಡುವ ದಿಕ್ಕಿನಲ್ಲಿ ಶ್ರಮಿಸುತ್ತಿದೆ. ಶೈಕ್ಷಣಿಕ ವಲಯ ಮತ್ತು ಕಂಪನಿಗಳನ್ನು ಬೆಸೆಯುವ ಕೆಲಸವೂ ಸಾಗಿದೆ.

ರಾಷ್ಟ್ರೀಯ ಮಾನ್ಯತೆಯ ಪ್ರಯೋಗಾಲಯ

ಪರೀಕ್ಷೆ ಮತ್ತು ಮಾಪನಾಂಕ ನಿರ್ಣಯ ಪ್ರಯೋಗಾಲಯಗಳಿಗಾಗಿ ರಾಷ್ಟ್ರೀಯ ಮಾನ್ಯತೆ ಮಂಡಳಿ (National Accreditation Board for Testing and Calibration Laboratories: NABL) ಯು ಇಲ್ಲಿಯ ಬೀಜ ಆರೋಗ್ಯ ತಪಾಸಣಾ ಕೇಂದ್ರಕ್ಕೆ ಮಾನ್ಯತೆ ನೀಡಿದೆ. ರಾಷ್ಟ್ರ ಮಟ್ಟದಲ್ಲಿ ಇಂತಹ ಬೀಜ ಆರೋಗ್ಯ ಪ್ರಯೋಗಾಲಯಕ್ಕೆ ಸಿಕ್ಕ ಮೊಟ್ಟಮೊದಲ ಹಾಗೂ ಏಕೈಕ ಮಾನ್ಯತೆಯ ಪ್ರಯೋಗಾಲಯ ನಮ್ಮ ವಿವಿಯದ್ದಾಗಿದೆ ಎನ್ನುತ್ತಾರೆ ವಿಭಾಗದ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರಾದ ಡಾ. ಎಂ. ಕೆ. ಪ್ರಸನ್ನಕುಮಾರ್.

ಬಿತ್ತನೆ ಬೀಜ ತಯಾರಿಕಾ ಕಂಪನಿಗಳು ಇವರ ಗ್ರಾಹಕರು. ರೈತರ ಹೊಲ ತೋಟಗಳಲ್ಲಿ ಉತ್ಪಾದಿಸಿದ ಬಿತ್ತನೆ ಬೀಜಗಳ ಮಾದರಿಗಳು ಪರೀಕ್ಷೆಗಾಗಿ ಈ ಪ್ರಯೋಗಾಲಯಕ್ಕೆ ಬರುತ್ತವೆ. ಬೀಜ ಆರೋಗ್ಯವನ್ನು ತಪಾಸಣೆ ಮಾಡಲಾಗುತ್ತದೆ. ವೈರಸ್, ಬ್ಯಾಕ್ಟೀರಿಯಾ, ಶಿಲೀಂಧ್ರಗಳ ಸೋಂಕು ಮತ್ತು ಕೀಟಬಾಧೆ ಮುಂತಾದುವನ್ನು ಪರೀಕ್ಷಿಸಲಾಗುತ್ತದೆ. ಪ್ರತಿ ಪರೀಕ್ಷೆಗಾಗಿ ನಿಗದಿಪಡಿಸಿದ ದರಗಳಿವೆ. ಅದರಿಂದ ಪರೀಕ್ಷಾ ಶುಲ್ಕವಾಗಿ ವಿವಿಗೆ ವಾರ್ಷಿಕ 70ರಿಂದ 80 ಲಕ್ಷ ರೂಪಾಯಿಗಳಷ್ಟು ಆದಾಯವಿದೆ.

ಅತಿ ಮುಖ್ಯವಾಗಿ ಬೀಜೋತ್ಪಾದನೆ ಮಾಡುವ ರೈತರಿಗೆ ಗ್ಯಾರಂಟಿ ಆದಾಯವಿದೆ. ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಬೀಜ ಮಾರಾಟ ಕಂಪನಿಗಳಾದ ಬೇಯರ್, ಸಿಂಜೆಂಟಾ, ನಹೆಮ್ಸ್, ನಾಮಧಾರಿ ಸೀಡ್ಸ್, ಪಯೋನೀರ್ ಕರ್ಟೋವಾ, ಸಕತಾ ಸೀಡ್ ಇಂಡಿಯಾ, ಎಎಮ್ ಕ್ಲಾಸ್, ಬಾಸ್ಫ್ ಮುಂತಾದವರು ರೈತರ ತೋಟ ಮತ್ತು ಹೊಲಗಳಲ್ಲಿ ಒಪ್ಪಂದದ ಮೇರೆಗೆ ಬೀಜಗಳನ್ನು ಉತ್ಪಾದಿಸಿ ರೈತರಿಗೆ ಖಚಿತ ಆದಾಯ ಬರುವಂತೆ ಮಾಡುತ್ತಿದ್ದಾರೆ. ಕಂಪನಿಗಳವರು ಅಂತಹ ಬೀಜದ ಮಾದರಿಗಳನ್ನು ಜಿಕೆವಿಕೆಯ ಪ್ರಯೋಗಾಲಯಕ್ಕೆ ಪರೀಕ್ಷೆಗಾಗಿ ನೀಡುತ್ತಾರೆ. ಕೆಲವೊಮ್ಮೆ ಸಸ್ಯಗಳೂ ಕೂಡ ಹಲವು ರೀತಿಯ ಪರೀಕ್ಷೆಗೆ ಒಳಗಾಗುತ್ತವೆ. ಪ್ರಯೋಗಾಲಯವು ಪ್ರಮಾಣ ಪತ್ರವನ್ನು ನೀಡುತ್ತದೆ. ಅಂತಹ ಪ್ರಮಾಣ ಪತ್ರವು ಬೀಜಗಳ ರಫ್ತಿಗೆ ಅತ್ಯಗತ್ಯ.

**ಅಂತರರಾಷ್ಟ್ರೀಯ ಕಾರ್ಯವಿಧಾನದಂತೆ ಬಿತ್ತನೆ ಬೀಜಗಳ ಪರೀಕ್ಷೆ**

ಅಂತರರಾಷ್ಟ್ರೀಯ ಬೀಜ ಪರೀಕ್ಷಾ ಸಂಘ (International Seed Testing Association: ISTA)ವು ರೂಪಿಸಿರುವ ಕಾರ್ಯವಿಧಾನದಂತೆ ಬಿತ್ತನೆ ಬೀಜಗಳ ಪರೀಕ್ಷೆಯನ್ನು ನಡೆಸಲಾಗುತ್ತಿದೆ. ಅದಕ್ಕಾಗಿ ಅಗತ್ಯವಿರುವ ಎಲ್ಲಾ ರೀತಿಯ ಅತ್ಯಾಧುನಿಕ ಉಪಕರಣಗಳು ಜಿಕೆವಿಕೆಯ ಕೃಷಿ ಕಾಲೇಜಿನ ಸಸ್ಯರೋಗ ವಿಜ್ಞಾನ ವಿಭಾಗದ ಪ್ರಯೋಗಾಲಯದಲ್ಲಿವೆ.

**ಕೃಷಿ ಮಂತ್ರಾಲಯದ ಅನುಮೋದನೆ**

ನಮ್ಮ ರಾಜ್ಯದಲ್ಲಿ ರೈತರ ಹೊಲ, ತೋಟ, ಗದ್ದೆಗಳಲ್ಲಿ ಉತ್ಪಾದಿಸಿದ ಬೀಜಗಳು ಹಲವು ಯೂರೋಪ್ ದೇಶಗಳು, ಅಮೆರಿಕಾ, ಬ್ರೆಜಿಲ್, ಆಗ್ನೇಯ ಏಶಿಯಾದ ದೇಶಗಳಿಗೆ ರಫ್ತಾಗುತ್ತಿವೆ. ರೈತರು ಅಂತಹ ಬೀಜೋತ್ಪಾದನೆಯ ಕೌಶಲ್ಯಗಳಾದ ಸಸ್ಯಗಳನ್ನು ಕೃತಕವಾಗಿ ಪರಾಗಸ್ಪರ್ಶಕ್ಕೊಳಪಡಿಸುವ ತರಬೇತಿ ಪಡೆದವರಾಗಿದ್ದಾರೆ. ನಮ್ಮ ದೇಶದ ಕೃಷಿ ಇಲಾಖೆಯ ಕ್ವಾರಂಟೈನ್ ವಿಭಾಗವು ಜಿಕೆವಿಕೆಯ ಸಸ್ಯರೋಗ ವಿಜ್ಞಾನ ವಿಭಾಗವು ಕೊಟ್ಟ ಬೀಜ ಆರೋಗ್ಯ ಪ್ರಮಾಣ ಪತ್ರಕ್ಕೊಂದು ಪ್ರತ್ಯೇಕ 'ಫೈಟೋಸ್ಯಾನಿಟರಿ ಪ್ರಮಾಣ ಪತ್ರ'ವನ್ನು ಲಗತ್ತಿಸಿ ರಫ್ತಿಗೆ ಅನುವು ಮಾಡಿಕೊಡುತ್ತದೆ. ಬೀಜೋತ್ಪಾದನೆಯಲ್ಲಿ ನಮ್ಮ ದೇಶವು ಚೀನಾವನ್ನು ಹಿಂದಿಕ್ಕಿದೆ ಎಂಬ ಮಾತಿದೆ.

ಫೈಟೋಸ್ಯಾನಿಟರಿ ಪ್ರಮಾಣ ಪತ್ರವು ಬಿತ್ತನೆ ಬೀಜಗಳಿಗೆ ಯಾವುದೇ ತೆರನಾದ ಸೋಂಕು ಇಲ್ಲದಿರುವುದನ್ನು ದೃಢಪಡಿಸುತ್ತದೆ. ದೇಶದೇಶಗಳ ಮಧ್ಯೆ ಬಿತ್ತನೆ ಬೀಜಗಳ ವ್ಯಾಪಾರಕ್ಕೆ ಇಂತಹ ಪ್ರಮಾಣ ಪತ್ರ ಬೇಕು. ಬಿತ್ತನೆ ಬೀಜಗಳ ರಫ್ತಿನಿಂದ ದೇಶದ ಆರ್ಥಿಕ ಪರಿಸ್ಥಿತಿಗೆ ಕೊಂಚ ಕೊಡುಗೆಯಿದೆ. ಕಡೂರು, ಕೊಪ್ಪಳ, ಹರಪನಹಳ್ಳಿ, ರಾಣಿಬೆನ್ನೂರು ಮತ್ತು ಸಿರಾ ಭಾಗಗಳಲ್ಲಿ ರೈತರು ಕಂಪನಿಗಳೊಂದಿಗೆ ಒಡಂಬಡಿಕೆ ಮಾಡಿಕೊಂಡು ಬಿತ್ತನೆ ಬೀಜ ಉತ್ಪಾದನೆ ಮಾಡಿ ಖಚಿತ ಆದಾಯವನ್ನು ಗಳಿಸುತ್ತಿದ್ದಾರೆ. ಇದೊಂದು ರೈತಸ್ನೇಹಿ ಯೋಜನೆ.

ಸಾಮಾನ್ಯವಾಗಿ ಮುಸುಕಿನ ಜೋಳ, ಟೊಮ್ಯಾಟೋ, ಮೆಣಸಿನಕಾಯಿ, ಕಲ್ಲಂಗಡಿ, ಕುಂಬಳಕಾಯಿ, ಸೌತೆಕಾಯಿ, ಹಾಗಲಕಾಯಿ, ಹಿರೇಕಾಯಿ, ಸೋರೆಕಾಯಿ, ಪಡುವಲಕಾಯಿ, ಕರಬೂಜ ಮುಂತಾದವುಗಳ ಬೀಜೋತ್ಪಾದನೆಯನ್ನು ರೈತರು ಮಾಡುತ್ತಿದ್ದಾರೆ. 'ನಮ್ಮ ಹೊಟ್ಟೆಯಲ್ಲಿ ದಕ್ಷಿಣ ಅಮೆರಿಕ' ಎಂಬ ಕೃತಿಯಲ್ಲಿ ಬಿ.ಜಿ.ಎಲ್. ಸ್ವಾಮಿಯವರು ಮೂಲತಃ ದಕ್ಷಿಣ ಅಮೆರಿಕದಿಂದ ಬಂದ ತರಕಾರಿಗಳ ವಿವಿಧ ತಳಿಗಳು ನಮ್ಮ ಹೊಟ್ಟೆ ಸೇರುತ್ತಿವೆ ಎಂದಿದ್ದಾರೆ. ಆದರ ಜಾಡಿನಲ್ಲಿ ನಾವಿಂದು ಯೋಚಿಸಿದರೆ, ನಮ್ಮ ರಾಜ್ಯದಲ್ಲಿ ಉತ್ಪತ್ತಿಯಾಗುತ್ತಿರುವ ಹಲವು ತರಕಾರಿ, ದವಸ ಧಾನ್ಯಗಳ ಬೀಜಗಳು ಬೆಳೆಯಾಗಿ, ಆಹಾರವಾಗಿ ವಿಶ್ವದ ಎಲ್ಲರ ಹೊಟ್ಟೆ ಸೇರುವಂತಾಗುತ್ತಿವೆ ಎಂಬುದು ಸೋಜಿಗವೇ ಸರಿ.

**ಗಮನ ಸೆಳೆಯುವ ಸಂಶೋಧನೆಗಳು**

ಬೀಜ ಆರೋಗ್ಯ ಪರೀಕ್ಷಾ ಪ್ರಯೋಗಾಲಯವು ತನ್ನ ಸಂಶೋಧನೆಯ ಹಾದಿಯಲ್ಲಿ ಹೊಸ ಆವಿಷ್ಕಾರಗಳನ್ನು ಮಾಡಿದೆ. ಪ್ರಯೋಗಾಲಯದ ಸಂಶೋಧಕರಾದ ಡಾ. ಪ್ರಸನ್ನಕುಮಾರ್ ಅವರು ಅಂತಹ ಒಳನೋಟಗಳನ್ನು ಹೀಗೆ ವಿವರಿಸಿದರು.

1. ಮುಸುಕಿನ ಜೋಳದ ದಂಟಿಗೆ ಬರುವ 'ಸ್ಟಾಕ್ ರಾಟ್' ಎಂಬ ರೋಗಕ್ಕೆ ಇಲ್ಲಿಯವರೆಗೆ ಫ್ಯುಸೇರಿಯಮ್ ವರ್ಟಿಸಿಲ್ಲಾಯ್ಡಸ್ ಎಂಬ ಶಿಲೀಂಧ್ರ ಕಾರಣವೆಂದು ತಿಳಿಯಲಾಗಿತ್ತು. ಆದರೆ ನಮ್ಮ ಪ್ರಯೋಗಾಲಯದ ಸಂಶೋಧನೆಯ ಪ್ರಕಾರ ಸಾರ್ಕೋಕ್ಲಾಡಿಯಮ್ ಜಿಯೇ ಎಂಬ ಶಿಲೀಂಧ್ರವು ಮೊದಲು ಸೋಂಕು ಉಂಟುಮಾಡಿದ ನಂತರ ಫ್ಯುಸೇರಿಯಮ್ ವರ್ಟಿಸಿಲ್ಲಾಯ್ಡಸ್ ಸೋಂಕು ತಗಲುತ್ತದೆ.

2. ಸೂಬಾಬುಲ್ ಎಂಬ ಮೇವು ಮರಕ್ಕೆ ಉಂಟಾಗುವ 'ವಿಲ್ಟ್' ರೋಗಕ್ಕೆ ಫ್ಯುಸೇರಿಯಮ್ ಫಾಲ್ಸಿಫಾರ್ಮೆ ಎಂಬ ಶಿಲೀಂಧ್ರ ಕಾರಣವೆಂದು ನಮ್ಮ ಪ್ರಯೋಗಾಲಯದಲ್ಲಿ ಮೊಟ್ಟಮೊದಲಿಗೆ ಕಂಡುಹಿಡಿದಿದ್ದೇವೆ. (ಅಂದಹಾಗೆ, ಕೂಬಾಬುಲ್ ಮರಕ್ಕೆ ಸೂಬಾಬುಲ್ ಎಂದು 1980ರ ದಶಕದಲ್ಲಿ ಹೆಸರಿಸಿದವರು ಪ್ರಧಾನ ಮಂತ್ರಿಗಳಾಗಿದ್ದ ಇಂದಿರಾ ಗಾಂಧಿಯವರು).

3. ಕ್ಯಾರೆಟ್ ಕೊಳೆತು ಹೋಗುವ 'ಸಾಫ್ಟ್ ರಾಟ್' ಎಂಬ ರೋಗಕ್ಕೆ ಪೆಕ್ಟೋಬ್ಯಾಕ್ಟೀರಿಯಮ್ ಕಾರಣವೆಂದು ತಿಳಿಯಲಾಗಿತ್ತು. ಆದರೆ, ನಮ್ಮ ಸಂಶೋಧನೆಗಳ ಪ್ರಕಾರ ಮಾನವ ಮತ್ತು ಪ್ರಾಣಿಗಳಲ್ಲಿ ನ್ಯುಮೋನಿಯಾ ಮತ್ತಿತರ ಕಾಯಿಲೆಗಳಿಗೆ ಕಾರಣವಾಗುವ ಕ್ಲೆಬ್ಸಿಯೆಲ್ಲಾ ನ್ಯುಮೋನಿಯೇ ಎಂಬ ಬ್ಯಾಕ್ಟೀರಿಯಾ ಕಾರಣವೆಂದು 2021–22ರಲ್ಲಿ ಕಂಡುಕೊಂಡಿದ್ದೇವೆ. ಕೋಲಾರ ಮತ್ತು ಬೆಂಗಳೂರು ಜಿಲ್ಲೆಗಳಲ್ಲಿ ಹರಿಯುವ ಕೊಳಚೆ ನೀರಿಗೆ ಬೆರೆಯುವ ವೈದ್ಯಕೀಯ ತ್ಯಾಜ್ಯವು ಈ ಸೋಂಕಿಗೆ ಕಾರಣವಿರಬಹುದು ಎಂಬ ಊಹೆ ನಮ್ಮದು. ಕ್ಲೆಬ್ಸಿಯೆಲ್ಲಾ ನ್ಯುಮೋನಿಯೇದಿಂದ ಕ್ಲೆಬ್ಸಿಯೆಲ್ಲಾ ವ್ಯಾರಿಕೋಲಾ ಎಂಬ ಮತ್ತೊಂದು ಬ್ಯಾಕ್ಟೀರಿಯಾಗೆ ಸಮತಳವಾಗಿ ಹರಿದುಬರುವ ಜೀನ್ ವರ್ಗಾವಣೆಯು (Gene Transfer) ಕ್ಯಾರೆನ 'ಸಾಫ್ಟ್ ರಾಟ್'ಗೆ ಕಾರಣವಿರಬಹುದಾಗಿದೆ.

4. ಸಿರಿಧಾನ್ಯವಾದ ಸಾಮೆಯ ಜೀನೋನ ಗುಣಲಕ್ಷಣಗಳನ್ನು ಕೆನಡಾದ ಸಸ್ಕಚೇವನ್ ವಿಶ್ವವಿದ್ಯಾಲಯದ ವಿಜ್ಞಾನಿಗಳಾದ ರಾಜು ಸೋಲನಾಯಕನಹಳ್ಳಿ ಮತ್ತು ಸತೀಶ್ ಕಾಗಲೆ ಅವರ ಜೊತೆಗೂಡಿದ ಸಂಶೋಧನೆಯಿಂದ ಕಂಡುಕೊಂಡಿದ್ದೇವೆ.

5. ಮಾಲೆಕ್ಯುಲಾರ್ ಬಯಾಲಜಿ ಅಥವಾ ಬಯೋಟೆಕ್ನಾಲಜಿಯ ಕಾಲವಿದು. ರೋಗನಿರ್ಣಯಕ್ಕಾಗಿ ಆಣ್ವಿಕ (ಮಾಲೆಕ್ಯುಲಾರ್) ಮಟ್ಟದಲ್ಲಿ ಹೊಸ ವಿಧಾನಗಳ ಹುಡುಕಾಟದಲ್ಲಿದ್ದೇವೆ. ಅವುಗಳು ಫಲ ಕೊಟ್ಟರೆ ಇನ್ನೊಂದಿಷ್ಟು ಸಸ್ಯ ರೋಗಗಳ ಮೂಲಗಳನ್ನು ಕರಾರುವಾಕ್ಕಾಗಿ ಪತ್ತೆ ಹಚ್ಚಬಹುದು. ಇದರಿಂದ ರೈತ ಸಮುದಾಯಕ್ಕೆ ಹೆಚ್ಚಿನ ಅನುಕೂಲವಾಗುತ್ತದೆ.

ಹೀಗೆ ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ಎಸ್. ವಿ. ಸುರೇಶರವರ ನಿರ್ದೇಶನದ ಮೇರೆಗೆ ಡಾ. ಪ್ರಸನ್ನಕುಮರ್ ಅವರು ತಮ್ಮ ಪ್ರಯೋಗಾಲಯದ ಪರೀಕ್ಷೆಗಳು ಮತ್ತು ಸಂಶೋಧನೆಗಳ ವಿವರಗಳನ್ನು ಅತ್ಯಂತ ಆತ್ಮೀಯತೆಯಿಂದ ನೀಡುತ್ತಾ ಹೋದರು. ನಾನು ಮತ್ತು ಡಾ. ಪ್ರಸನ್ನಕುಮಾರ್ ಅವರು ಕರ್ನಾಟಕ ರಾಜ್ಯ ಶಿಕ್ಷಣ ನೀತಿ ಆಯೋಗವು 2023ರಲ್ಲಿ ರಚಿಸಿದ ಕೃಷಿ ಶಿಕ್ಷಣದ ಕಾರ್ಯಪಡೆಯ ಸದಸ್ಯರಾಗಿ ಕಾರ್ಯನಿರ್ವಹಿಸಿದಾಗ ಸ್ನೇಹ ಬೆಳೆದಿತ್ತು. ಅವರ ಪ್ರಯೋಗಾಲಯದಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಬೀಜ ಉತ್ಪಾದನೆ ಮತ್ತು ಮಾರುಕಟ್ಟೆ ಕಂಪನಿಗಳಲ್ಲಿ ಉತ್ತಮ ಉದ್ಯೋಗಾವಕಾಶಗಳಿವೆ.

**ಪ್ರಯೋಗಾಲಯದಿಂದ ವಿಶ್ವ ದರ್ಜೆಯ ಸಂಶೋಧನಾ ಪ್ರಕಟಣೆಗಳು**

ಬೀಜ ಆರೋಗ್ಯ ತಪಾಸಣೆ ಮಾಡುತ್ತಿರುವ ಜಿಕೆವಿಕೆಯ ಪ್ರಯೋಗಾಲಯದ ವಿಜ್ಞಾನಿಗಳ ಸಂಶೋಧನಾ ಲೇಖನಗಳು ವಿಶ್ವ ದರ್ಜೆಯ ಜರ್ನಲ್‌ಗಳಲ್ಲಿ ಪ್ರಕಟವಾಗುತ್ತಿವೆ. 'ನೇಚರ್' ಅಥವಾ ಅದರ ಸಮೂಹ ಪತ್ರಿಕೆಗಳಲ್ಲೊಂದು ಲೇಖನ ಪ್ರಕಟವಾಗುವುದು ಯಾವುದೇ ವಿಜ್ಞಾನಿಯ ಜೀವಮಾನದ ಆಸೆ ಮತ್ತು ಪ್ರತಿಷ್ಠೆ. ಅಂತಹುದೊಂದು ಆಸೆಯ ಈಡೇರಿಕೆಗಾಗಿ ಡಾ. ಪ್ರಸನ್ನಕುಮಾರ್ ಮತ್ತವರ ತಂಡ 'ನೇಚರ್ ಕಮ್ಯುನಿಕೇಷನ್ಸ್'ನಲ್ಲೊಂದು ಲೇಖನ ಪ್ರಕಟಿಸಿದೆ.

ಉತ್ತಮ ಇಂಪ್ಯಾಕ್ಟ್ ಫ್ಯಾಕ್ಟರ್ ಹೊಂದಿರುವ ಜರ್ನಲ್‌ಗಳಲ್ಲಿ ಪ್ರಯೋಗಾಲಯದ ಲೇಖನಗಳು ಪ್ರಕಟವಾಗುತ್ತಿವೆ. ಪ್ಲಾಂಟ್ ಮಾಲೆಕ್ಯುಲಾರ್ ಬಯಾಲಜಿ, ಪ್ಲಾಂಟ್ ಸ್ಟೆನ್ಸ್, ಮೈಕ್ರೋಬಯಾಲಾಜಿಕಲ್ ರೀಸರ್ಚ್, ದಿ ಪ್ಲಾಂಟ್ ಜರ್ನಲ್, ಫಿಶಿಯಲಾಜಿಕಲ್ ಅಂಡ್ ಮಾಲೆಕ್ಯುಲಾರ್ ಪ್ಲಾಂಟ್ ಪೆಥಾಲಜಿ ಮತ್ತು ಪ್ಲಾಂಟ್ ಪೆಥಾಲಜಿಯಂತಹ ಪ್ರತಿಷ್ಠಿತ ಜರ್ನಲ್‌ಗಳಲ್ಲಿ ಸಂಶೋಧನಾ ಲೇಖನಗಳು ಪ್ರಕಟಗೊಂಡು ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಹಿರಿಮೆಯನ್ನು ಹೆಚ್ಚಿಸಿವೆ. ಇಂತಹ ಸಂಶೋಧನೆ ಮತ್ತು ಲೇಖನಗಳ ಜ್ಞಾನವು ಕೃಷಿ ವಿಜ್ಞಾನಿಗಳಿಗಷ್ಟೇ ಅಲ್ಲದೆ ಸಾಂಪ್ರದಾಯಕ ವಿಶ್ವವಿದ್ಯಾಲಯಗಳ ಸಸ್ಯ ವಿಜ್ಞಾನ, ಬಯೋಟೆಕ್ನಾಲಜಿ, ಮಾಲೆಕ್ಯಲಾರ್ ಬಯಾಲಜಿಯಂತಹ ವಿಷಯ ತಜ್ಞರಿಗೂ, ಶಿಕ್ಷಕರಿಗೂ, ಸಂಶೋಧಕರಿಗೂ ಅತ್ಯಗತ್ಯ.

ಅವರ ವಿಶ್ವ ದರ್ಜೆಯ ಸಂಶೋಧನಾ ಪ್ರಕಟಣೆಗಳನ್ನು ಜಿಕೆವಿಕೆಯ ಗ್ರಂಥಾಲಯದಲ್ಲಿ ಪ್ರದರ್ಶನಕ್ಕಿಟ್ಟಿರುವುದೊಂದು ವಿಶೇಷ. ಅದು ವಿದ್ಯಾರ್ಥಿಗಳ ಗಮನ ಸೆಳೆದು ಪ್ರತಿಭಾವಂತರನ್ನು ರೂಪಿಸುವಲ್ಲಿ ಸಹಕಾರಿಯಾಗಲಿದೆ.

**ಪ್ರತಿಷ್ಠಿತ ವಿಭಾಗ ಪ್ರಸಿದ್ಧ ವ್ಯಕ್ತಿಗಳು**

ಜಿಕೆವಿಕೆಯ ಕೃಷಿ ಕಾಲೇಜಿನ ಸಸ್ಯ ರೋಗ ವಿಜ್ಞಾನ (ಪ್ಲಾಂಟ್ ಪೆಥಾಲಜಿ) ವಿಭಾಗವು ಒಂದು ಪ್ರತಿಷ್ಠಿತ ವಿಭಾಗವಾಗಿ ರೂಪುಗೊಂಡಿದೆ. ಅಲ್ಲಿ ಸೇವೆ ಸಲ್ಲಿಸಿದ ಹಲವು ಹಿರಿಯ ಪ್ರಾಧ್ಯಾಪಕರು ಶೈಕ್ಷಣಿಕ ವಾತಾವರಣ, ಸಂಶೋಧನೆ ಮತ್ತು ವಿಸ್ತರಣಾ ಚಟುವಟಿಕೆಗಳಿಗೆ ಉತ್ತಮ ಬುನಾದಿಯನ್ನು ಹಾಕಿ ಕೊಟ್ಟಿದ್ದಾರೆ. ವೈರಾಲಜಿ ಸಂಶೋಧನೆಯ ಡಾ. ವಿ. ಮುನಿಯಪ್ಪ, ನೆಮಟಾಲಜಿ ಸಂಶೋಧನೆಯ ಡಾ. ಕೆ. ಕೃಷ್ಣಪ್ಪರವರನ್ನು ವಿವಿಯ ಎಲ್ಲರೂ ಇಂದಿಗೂ ನೆನೆಯುತ್ತಾರೆ.

ಕೋವಿಡ್ 19 ಕಾಯಿಲೆಗೆ ಕೊವ್ಯಾಕ್ಸಿನ್ (Covaxin) ಲಸಿಕೆ ಉತ್ಪಾದಿಸಿದ ಹೈದರಾಬಾದಿನ ಭಾರತ್ ಬಯೋಟೆಕ್ ಕಂಪನಿಯ ಸಹ–ಸಂಸ್ಥಾಪಕರಾದ ಡಾ. ಕೃಷ್ಣ ಎಲ್ಲರವರು ಇದೇ ವಿಭಾಗದಲ್ಲಿ ಮಾಸ್ಟರ್ಸ್ ಪದವಿ ಪಡೆದವರು ಎಂಬ ಹೆಗ್ಗಳಿಕೆಯಿದೆ.

**ಕೊನೆಯ ಮಾತು**

ಕೆನಡಾ ದೇಶದವರಾದ ಡಾ. ಅಡಾಲ್ಫ್ ಲೆಹ್ಮನ್‌ರವರು ಮೈಸೂರು ಸಂಸ್ಥಾನದ ಕೃಷಿ ರಾಸಾಯನಿಕ ತಜ್ಞರಾಗಿ 1899ರಲ್ಲಿ ನೇಮಕಗೊಂಡು ಹಲವಾರು ಕಾರ್ಯಭಾರಗಳನ್ನು ನೆರವೇರಿಸಿದರು. ಅವರದೇ ಮಾತಿನಲ್ಲಿ ಹೇಳುವುದಾದರೆ ಕೃಷಿ ರಾಸಾಯನಿಕ ತಜ್ಞರ ಹುದ್ದೆಯ ಜೊತೆಗೆ ಕೃಷಿ ಕೀಟಗಳ ಹತೋಟಿ, ಶಿಲೀಂಧ್ರ ರೋಗಗಳ ಹತೋಟಿಗೆ ಶ್ರಮಿಸಿ ಮಹಾರಾಜರಾದ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರಿಂದ ಸೈ ಎನಿಸಿಕೊಂಡರು. ಹೆಬ್ಬಾಳದಲ್ಲಿ ಕೃಷಿ ಪ್ರಾಯೋಗಿಕ ಕ್ಷೇತ್ರ ಸ್ಥಾಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿದರು. ಲೆಹ್ಮನ್‌ರವರು ತಮ್ಮ ಸೇವೆಯ ನಂತರ ಡಾ. ಲೆಸ್ಲಿ ಸಿ. ಕೋಲ್ಮನ್‌ರವರನ್ನು ಮೈಸೂರು ಸಂಸ್ಥಾನದಲ್ಲಿ ಕೃಷಿ ಕೀಟ ಮತ್ತು ಶಿಲೀಂಧ್ರ ರೋಗಗಳ ತಜ್ಞರನ್ನಾಗಿ ನೇಮಿಸಿಕೊಳ್ಳಲು ಶಿಫಾರಸ್ಸು ಮಾಡಿದರು.

ಹಾಗೆ ನೇಮಕಗೊಂಡ ಕೆನಡಾ ದೇಶದವರಾದ ಡಾ. ಲೆಸ್ಲಿ ಸಿ. ಕೋಲ್ಮನ್‌ರವರು 1908ರಲ್ಲಿ ಮೈಸೂರು ಸಂಸ್ಥಾನಕ್ಕೆ ಆಗಮಿಸಿ 1934ರವರೆಗೆ ಸುಮಾರು 26 ವರ್ಷಗಳ ಕಾಲ ಕೃಷಿಯ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸಿದರು. ಕೃಷಿ ಇಲಾಖೆಯ ನಿರ್ದೇಶಕರಾಗಿ, ಹೆಬ್ಬಾಳದ ಕೃಷಿ ಶಾಲೆಯ ಪ್ರಾಂಶುಪಾಲರಾಗಿ ಅಗಾದವಾದ ಕೊಡುಗೆ ನೀಡಿದರು. ಪ್ರತ್ಯೇಕವಾಗಿಯೇ ಕಾರ್ಯನಿರ್ವಹಿಸುತ್ತಿದ್ದ ಪಶುವೈದ್ಯಕೀಯ ಇಲಾಖೆ, ಜಾನುವಾರು ಇಲಾಖೆ ಹಾಗೂ ಅಮೃತ್ ಮಹಲ್ ಇಲಾಖೆಯ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿದರು.

ಡಾ. ಲೆಹ್ಮನ್ ಮತ್ತು ಡಾ. ಕೋಲ್ಮನ್‌ರವರ ಕರ್ಮಭೂಮಿಯಾದ ಹೆಬ್ಬಾಳ ಕೃಷಿ ಕ್ಷೇತ್ರ ಮತ್ತು ಹೆಬ್ಬಾಳದ ಕೃಷಿ ಶಾಲೆಯು ಬೆಳದು ಹೆಮ್ಮರವಾಗಿ ಕೃಷಿ ಕಾಲೇಜಾಗಿ, ಕೃಷಿ ವಿಶ್ವವಿದ್ಯಾಲಯವಾಯಿತು. ಬೆಂಗಳೂರು ಕೃಷಿ ವಿಶ್ವವಿದ್ಯಾಲಯಕ್ಕೆ ಉತ್ತಮೋತ್ತಮ ಅಧಿಕಾರಿಗಳು, ಶಿಕ್ಷಕರು, ಸಂಶೋಧಕರು, ವಿಸ್ತರಣಾ ಮುಂದಾಳುಗಳು ದಕ್ಕಿದರು. ಅಲ್ಲೊಂದು ದೊಡ್ಡ ಚಿಂತಕರ ಚಾವಡಿಯೇ ಸದಾ ಇರುತ್ತಿತ್ತು. ಸದಾ ದೇಶ, ವಿದೇಶಗಳ ಸಂಶೋಧನೆಗಳ ಚರ್ಚೆಯಾಗುತ್ತಿತ್ತು. ಅಂತಹ ಪರಂಪರೆಯ ಕೊಂಡಿಯನ್ನು ಇಂದಿಗೂ ಕಾಯ್ದುಕೊಳ್ಳಲಾಗಿದೆ ಎಂಬುದು ಸಂತೋಷಕರ ವಿಷಯ. ಶೈಕ್ಷಣಿಕ ವಾತಾವರಣದ ಉತ್ತಮ ಪರಂಪರೆಯನ್ನು ಕಾಯ್ದುಕೊಂಡರೆ ದೇಶ, ಭಾಷೆ, ಜನಾಂಗಗಳನ್ನು ಕಟ್ಟಬಹುದಾಗಿದೆ.

**–ಪ್ರೊ. ಎಂ. ನಾರಾಯಣ ಸ್ವಾಮಿ**

# ಮೊದಲನೇ ಪುಟದಿಂದ

## ವೇಗ ನೀಡಿ: ಸಂಸದ ಜಿ.ಕುಮಾರ ನಾಯಕ

ಉತ್ತರದ ಹೊಸದಿಲ್ಲಿವರೆಗೆ ಪ್ರಮುಖ ರೈಲುಗಳು ರಾಯಚೂರು ಮಾರ್ಗವಾಗಿಯೇ ಸಂಚರಿಸುತ್ತವೆ. ಇದು ನಮ್ಮ ಭಾಗ್ಯ. ಈ ರೈಲ್ವೆ ಲೈನದಲ್ಲಿ ಪ್ರತಿ ದಿನ ಸಾಕಷ್ಟು ಗೂಡ್ಸ್ ರೈಲುಗಳು ಸಂಚರಿಸುತ್ತವೆ. ಕೃಷಿ, ತೋಟಗಾರಿಕೆ, ವಾಣಿಜ್ಯ ಉತ್ಪನ್ನಗಳ ಸರಬರಾಜಿಗೆ ಇದು ಸಾಕಷ್ಟು ಅನುಕೂಲವಾಗಲಿದೆ. ಹಾಗಾಗಿ ರೈಲ್ವೆ ಇಲಾಖೆಗೆ ಸಂಬಂಧಿಸಿದ ಯಾವುದೇ ಕಾರ್ಯಗಳ ಪ್ರಗತಿಗೆ ಒತ್ತು ಕೊಡಬೇಕು ಎಂದು ಸಂಸದರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ರೈಲ್ವೆ ಯೋಜನೆಗಳ ಅನುಷ್ಠಾನಕ್ಕೆ ಭೂಮಿ ಒದಗಿಸುವ ರೈತರಿಗೆ ಭೂ ಪರಿಹಾರ ಪಾವತಿಯು ಕಾಲಮಿತಿಯೊಳಗೆ ಆಗಬೇಕು. ರೈತರಿಗೆ ನ್ಯಾಯ ಸಿಗುವಂತಾಗಬೇಕು. ಇದಕ್ಕೆ ಅಧಿಕಾರಿಗಳು ಹೆಚ್ಚಿನ ಒತ್ತು ಕೊಡಬೇಕು. ಸಭೆಯಲ್ಲಿ ವರದಿ ಒಪ್ಪಿಸುವುದಷ್ಟೇ ಅಧಿಕಾರಿಗಳ ಕೆಲಸವಲ್ಲ, ಕಾಳಜಿ ಮತ್ತು ಶ್ರದ್ಧೆಯಿಂದ ಕಾರ್ಯನಿರ್ವಹಿಸಬೇಕು ಎಂದು ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರಾದ ಎನ್.ಎಸ್.ಬೋಸರಾಜು ಅವರು ಅಧಿಕಾರಿಗಳಿಗೆ ಇದೆ ವೇಳೆ ಸೂಚನೆ ನೀಡಿದರು.

ಪಿಎಂಶ್ರೀ ಶಾಲೆಗಳಿಗೆ ಮಂಜೂರಾಗಿರುವ ಕಾಮಗಾರಿಗಳ ಬಗ್ಗೆ ಸಂಸದರು ಪರಿಶೀಲಿಸಿದರು. 2024-25ನೇ ಸಾಲಿಗೆ ಪಿಎಂಶ್ರೀ ಶಾಲೆಗಳಿಗೆ ಮೂಲಭೂತ ಸೌಕರ್ಯ ಒದಗಿಸಲು ಕೋಟಿ ಗೂ ಹೆಚ್ಚು ಅನುದಾನ ಮಂಜೂರಾಗಿದ್ದು, ಪಿಆರ್‌ಇಡಿ, ಲೋಕೋಪಯೋಗಿ ಇಲಾಖೆಗಳಿಂದ ಕೊಠಡಿಗಳ ನಿರ್ಮಾಣ ಕಾರ್ಯ ನಡೆಯುತ್ತಿದೆ. ಅದೇ ರೀತಿ 2025-26ನೇ ಸಾಲಿನಲ್ಲಿ 115 ಲಕ್ಷ ರೂ ವೆಚ್ಚದಲ್ಲಿ 4 ಶಾಲೆಗಳಲ್ಲಿ ಕೊಠಡಿಗಳ ನಿರ್ಮಾಣ ಕಾರ್ಯ ನಡೆಯುತ್ತಿದೆ. 2025-26ನೇ ಸಾಲಿನಲ್ಲಿ ಕೇಂದ್ರ ಅನುಮೋದನೆ ಮಂಡಳಿಯಿಂದ ಧರ್ತಿ ಅಬಾ ಜನ್ ಜಾತಿಯ ಗ್ರಾಮ ಉತ್ಕರ್ಷ ಅಭಿಯಾನ ಯೋಜನೆಯಡಿ ವಸತಿ ನಿಲಯಗಳ ನಿರ್ಮಾಣಕ್ಕೆ 23 ಕೋಟಿ ರೂ ಮಂಜೂರಾಗಿದೆ. 2025-26ನೇ ಸಾಲಿನಲ್ಲಿ ಕೆಕೆಆ-ರ್ಡಿಬಿಯಿಂದ 35 ಕೆಪಿಎಸ್ ಶಾಲೆಗಳು ಮಂಜೂರಾಗಿವೆ. ಸಮಗ್ರ ಶಿಕ್ಷಣ ಕರ್ನಾಟಕದಿಂದ 2023-24ನೇ ಸಾಲಿನಲ್ಲಿ ಮಂಜೂರಾದ ಪೂರ್ವ ಪ್ರಾಥಮಿಕ ತರಗತಿಗಳನ್ನು 2024-25ನೇ ಸಾಲಿನಲ್ಲಿ 4 ಶಾಲೆಗಳಲ್ಲಿ ಪೂರ್ವ ಪ್ರಾಥಮಿಕ ತರಗತಿಗಳನ್ನು ಆರಂಭಿಸಲಾಗಿದೆ ಎಂದು ಶಾಲಾ ಶಿಕ್ಷಣ ಇಲಾಖೆಯ ಅಧಿಕಾರಿ ಕೆ.ಡಿ.ಬಡಿಗೇರ ಅವರು ಸಭೆಗೆ ಮಾಹಿತಿ ನೀಡಿದರು.

ಬಿಎಸ್‌ಎನ್‌ಎಲ್ ಯೋಜನೆಗಳ ಬಗ್ಗೆ ಸಂಸದರು ಕೇಳಿದರು. ಬಿಎಸ್-ಎನ್‌ಎಲ್ ಅಡಿಯಲ್ಲಿ 4ಜಿ ಮೊಬೈಲ್ ಟವರ್‌ಗಳನ್ನು ಸ್ಥಾಪಿಸಲಾಗುತ್ತಿದೆ. ಈಗಾಗಲೇ ರಾಯಚೂರು ಜಿಲ್ಲೆಯಲ್ಲಿ ಪ್ರಸ್ತುತ 95 ಗ್ರಾಮ ಪಂಚಾಯತ್‌ಗಳಲ್ಲಿ ಇಂಟರ್‌ನೆಟ್ ಕಾರ್ಯನಿರ್ವಹಿಸುತ್ತಿದ್ದು, ಹಂತ ಹಂತವಾಗಿ ಎಲ್ಲಾ 191 ಗ್ರಾಮ ಪಂಚಾಯತ್‌ಗಳಿಗೆ ಇಂಟರ್‌ನೆಟ್ ಸಂಪರ್ಕ ನೀಡಲಾಗುತ್ತದೆ. ಮುಂದಿನ ಮೊಬೈಲ್ ವಿಸ್ತರಣಾ ಹಂತದಲ್ಲಿ, ಇನ್ನೂ ಮೊಬೈಲ್ ಸಂಪರ್ಕ ಅಥವಾ ಇಂಟರನೆಟ್ ಸೌಲಭ್ಯವಿಲ್ಲದ ಗ್ರಾಮಗಳಿಗೆ 4ಜಿ ಸೇವೆಗಳು ಒದಗಿಸುವ ಯೋಜನೆ ರೂಪಿಸಲಾಗಿದೆ ಎಂದು ಬಿಎಸ್‌ಎನ್‌ಎಲ್ ಅಧಿಕಾರಿಗಳು ಸಭೆಗೆ ಮಾಹಿತಿ ನೀಡಿದರು.

ತೀವ್ರ ಅಸಮಾಧಾನ: ಸರ್ಕಾರದ ವಿವಿಧ ಕಾರ್ಯಕ್ರಮಗಳಿಗೆ ಫಲಾನುಭವಿಗಳಾದವರಿಗೆ ಸಾಲ ಸೌಕರ್ಯ ಮಂಜೂರಿ ಮಾಡಲು ಸಿ-ಬಿಲ್ ಸ್ಕೋರ್ ಏಕೆ ಕೇಳುತ್ತೀರಿ? ಎಂದು ಬ್ಯಾಂಕಿನ ಅಧಿಕಾರಿಗಳ ಕಾರ್ಯವೈಖರಿಯ ಬಗ್ಗೆ ಸಂಸದರು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು. ಕಡು ಬಡವರು, ಮಧ್ಯಮ ವರ್ಗದ ಜನರನ್ನು ಬ್ಯಾಂಕುಗಳಿಗೆ ಅಲೆದಾಡಿಸದೇ ಸರ್ಕಾರದ ಯೋಜನೆಯ ಫಲಾನುಭವಿ ಎಂಬುದನ್ನು ಖಚಿತಪಡಿಸಿಕೊಂಡು ಸಾಲಸೌಕರ್ಯ ನೀಡಲು ಎಲ್ಲ ಬ್ಯಾಂಕಿನ ಮ್ಯಾನೇಜರಗಳಿಗೆ ಆದೇಶ ಮಾಡಬೇಕು ಎಂದು ಸಂಸದರು ಲೀಡ್ ಬ್ಯಾಂಕಿನ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ನಿರ್ದೇಶನ ನೀಡಿದರು.

ಜನತೆಗೆ ನೀರು ಪೂರೈಸಿ: ಜಲಜೀವನ ಮಿಷನ್ ಯೋಜನೆ ಅನುಷ್ಠಾನದ ಚರ್ಚೆ ವೇಳೆ ರಾಯಚೂರು ಗ್ರಾಮೀಣ ಶಾಸಕರಾದ ಬಸನಗೌಡ ದದ್ದಲ್ ಅವರು ಮಾತನಾಡಿ, ಜನತೆಗೆ ನೀರು ಪೂರೈಸುವ ಕಾರ್ಯವಾಗಬೇಕು. ನೀರು ಪೂರೈಸದಿದ್ದರೆ ಜನ ಬೀದಿಗಿಳಿದು ಪ್ರತಿಭಟಿಸುತ್ತಾರೆ ಎಂಬುದರ ಬಗ್ಗೆ ಅರಿವಿರಬೇಕು. ನಾವು ಜನರ ಭಾವನೆಗಳಿಗೆ ಸ್ಪಂದನೆ ನೀಡಬೇಕು. ಜಿಲ್ಲಾ ಪಂಚಾಯತ್ ಸಿಇಓ ಅವರು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಅಧಿಕಾರಿಗಳೊಂದಿಗೆ ಕಾಲಕಾಲಕ್ಕೆ ಸಭೆ ನಡೆಸಿ ಕುಡಿಯುವ ನೀರಿನ ಯೋಜನೆಗಳ ಅನುಷ್ಠಾನಕ್ಕೆ ಹೆಚ್ಚಿನ ಆದ್ಯತೆ ಕೊಡಬೇಕು ಎಂದು ತಿಳಿಸಿದರು.

ತನಿಖೆಗೆ ಒತ್ತಾಯ: ಜಲಜೀವನ ಮಿಷನ್ ಯೋಜನೆಯ ಕಾಮಗಾರಿಗಳ ಬಗ್ಗೆ ಸಭೆಯಲ್ಲಿ ಸುಧೀರ್ಘ ಚರ್ಚೆ ನಡೆಯಿತು. ಜಲಜೀವನ ಮಿಷನ್ ಯೋಜನೆ ಸಂಪೂರ್ಣ ಫೇಲ್ ಆಗಿದೆ. ಕಳಪೆ ಕಾಮಗಾರಿಯ ಬಗ್ಗೆ ತನಿಖೆಗೆ ಆದೇಶ ಮಾಡಬೇಕು ಎಂದು ದೇವದುರ್ಗ ಕ್ಷೇತ್ರದ ಶಾಸಕರಾದ ಕರೆಮ್ಮ ಜಿ ನಾಯಕ ಅವರು ಸಭೆಯಲ್ಲಿ ಆಗ್ರಹಿಸಿದರು.

ಅಧಿಕಾರಿಗಳಿಗೆ ನಿರ್ದೇಶನ: ರಾಯಚೂರು ಜಿಲ್ಲೆಯ ಎಲ್ಲ ಗ್ರಾಮೀಣ ಜನ ವಸತಿಗಳಿಗೆ ಹಾಗೂ 7 ನಗರ ಸ್ಥಳೀಯ ಸಂಸ್ಥೆಗಳಾದ ಮಾನ್ವಿ, ಮಸ್ಕಿ, ಕವಿತಾಳ, ತುರವಿಹಾಳ, ಬಳಗಾನೂರ, ಸಿರವಾರ ಮತ್ತು ಹಟ್ಟಿಗಳಿಗೆ ಡಿಬಿಓಟಿ ಆಧಾರದ ಮೇಲೆ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಯನ್ನು ಜಲಜೀವನ ಮಿಷನ್ ಯೋಜನೆಯಡಿ ನಬಾರ್ಡ ಹಾಗೂ ಯುಡಿಡಿ ಅನುದಾನ ನೆರವಿನೊಂದಿಗೆ ಸಂಯೋಜಿತಗೊಳಿಸಿ ಅನುಷ್ಠಾನಗೊಳಿಸುವ ಕಾರ್ಯವು ವೇಗವಾಗಿ ನಡೆಯುವಂತೆ ನೋಡಿಕೊಳ್ಳಬೇಕು ಎಂದು ಸಂಸದರು ಇದೆ ವೇಳೆ ಸಂಬಂಧಿಸಿದ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ನಾಮ ನಿರ್ದೇಶಿತ ಸದಸ್ಯರಿಂದ ಅಸಮಾಧಾನ: ಇಂಡಿಯಾ ಪೋಸ್ಟ್ ಯೋಜನೆಗಳಿಗೆ ಸರಿಯಾದ ಪ್ರಚಾರ ಸಿಗುತ್ತಿಲ್ಲ. ಬಹುತೇಕ ಅಂಚೇ ಕಚೇರಿಗಳು ಹಳೆಯ ಕಟ್ಟಡದಲ್ಲೇ ಕಾರ್ಯ ನಿರ್ವಹಿಸುತ್ತಿವೆ. ಹಳ್ಳಿಗಳಲ್ಲಿ ಬಿಎಸ್‌ಎನ್‌ಎಲ್ ಸಂಪರ್ಕ ಸಾಧ್ಯವಾಗುತ್ತಿಲ್ಲ. ಕೇಂದ್ರ ಪುರಸ್ಕೃತ ಆರೋಗ್ಯ ಯೋಜನೆಗಳು ಜನರ ಮನೆ ಬಾಗಿಲಿಗೆ ತಲುಪುತ್ತಿಲ್ಲ. ಜಲಜೀವನ ಮಿಷನ್ ಯೋಜನೆ ಸಂಪೂರ್ಣ ಕಳಪೆಯಾಗಿದೆ ಎಂದು ನಾಮ ನಿರ್ದೇಶಿತ ಸದಸ್ಯರಾದ ಹನುಮಂತ್ರಾಯ ನಾಯಕ, ತಿಪ್ಪಣ್ಣ, ರಾಘವೇಂದ್ರ, ರಜಿಯಾ ಸುಲ್ತಾನ ಅವರು ಸಭೆಯಲ್ಲಿ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

ಸಭೆಯಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅರುಣಾಂಗ್ಷು ಗಿರಿ, ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಹಾಲಸಿದ್ದಪ್ಪ ಪೂಜಾರಿ, ಜಿಲ್ಲಾ ಪಂಚಾಯತ್ ಮುಖ್ಯ ಯೋಜನಾಧಿಕಾರಿ ಡಾ.ಟಿ ರೋಣಿ, ಸಹಾಯಕ ಆಯುಕ್ತರಾದ ಡಾ.ಹಂಪಣ್ಣ ಸಜ್ಜನ್ ಹಾಗೂ ವಿವಿಧ ಇಲಾಖೆಗಳ ಜಿಲ್ಲಾಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

## ತಜ್ಞರಿಂದ ಸಮೀಕ್ಷೆಗೆ ವಿಧಾನಪರಿಷತ್ ಸದಸ್ಯ ವಿಶ್ವನಾಥ್ ಒತ್ತಾಯ

ಎಂದುಕೊಂಡಿದ್ದೇನೆ" ಎಂದು ವ್ಯಂಗ್ಯವಾಡಿದರು.

"ಮಾತು ತಪ್ಪಿದ ಮಗ ನೀವು. ಶಿವಕುಮಾರ್ ಅವರಿಗೆ ಹೊಡೆತ ಕೊಟ್ಟಿದ್ದೀರಿ. ಈ ಸರ್ಕಾರ ಬರಲು ಶಿವಕುಮಾರ್ ಅವರ ಕೊಡುಗೆ ಏನೂ ಇಲ್ಲವೇ? ಅವರಿಗೆ ಅಧಿಕಾರ ಕೊಡಬೇಕಲ್ಲವೇ?" ಎಂದು ಕೇಳಿದರು. "ನಾನೇ ಮಹಾಮೇಧಾವಿ, ಮಹಾ ಆರ್ಥಿಕ ತಜ್ಞ ಹಾಗೂ ಮಹಾಬುದ್ಧಿವಂತ ಎಂಬ ಅಹಂ ಬಿಟ್ಟು, ಅರ್ಹರಿಗೆ ಮಾತ್ರವೇ ಗ್ಯಾರಂಟಿ ಯೋಜನೆಗಳನ್ನು ಕೊಡಿ" ಎಂದರು.

ಸ್ನೇಹಮಯಿ ಬಂಧನಕ್ಕೆ ಖಂಡನೆ: "ಸಾಮಾಜಿಕ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ಅವರನ್ನು ಬಂಧಿಸಿರುವುದು ಖಂಡನೀಯ. ಅವರು ಈ ನೆಲದ ಕಾನೂನಿನ ಮೂಲಕ ಹೋರಾಟ ಮಾಡುತ್ತಿದ್ದಾರೆ. ರಾಜ್ಯದಲ್ಲೇನು ತುರ್ತು ಪರಿಸ್ಥಿತಿ ಇದೆಯೇ? ಸರ್ಕಾರದ ತಪ್ಪು ಹುಡುಕಿದವರನ್ನು ಜೈಲಿಗೆ ಹಾಕುತ್ತೀರಾ?" ಎಂದು ಕೇಳಿದರು.

# ಬೋರ್ಡ್ ಇಲ್ಲದ ಇಂದಿರಾ ಕ್ಯಾಂಟೀನ್ ಹಸಿದವರಿಗೆ ಕ್ಯಾಂಟೀನ್ ಹುಡುಕುವ ಸವಾಲು

ಮಲ್ಲಿಕಾರ್ಜುನ

ಮಸ್ಕಿ ಫೆ 21- ವಿವಿಧ ಕೆಲಸಕ್ಕೆಂದು ಪಟ್ಟಣಕ್ಕೆ ಬರುವ ಗ್ರಾಮೀಣ ಪ್ರದೇಶದ ಜನರಿಗೆ ಅನುಕೂಲವಾಗಲೆಂದು ಸರ್ಕಾರ ಇಂದಿರಾ ಕ್ಯಾಂಟೀನ್ ಆರಂಭಿಸಿದೆ. ಆದರೆ ಇದು ಪಟ್ಟಣದ ಹೃದಯಭಾಗದಲ್ಲೇ ಇದ್ದರೂ ಸಾರ್ವಜನಿಕರಿಗೆ ಕಾಣದಂತಾಗಿದೆ!

ಮಸ್ಕಿಯ ಇಂದಿರಾ ಕ್ಯಾಂಟೀನ್ ಹಳೆಯ ಪ್ರವಾಸಿ ಮಂದಿರದ ಒಳಗಡೆ ಕಳೆದ ವರ್ಷ ಅಂದರೆ, ಫೆ.23 2025 ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿದರು.

ಅಂದಿನಿಂದ ಅಲ್ಲಿನ ಹೊರ ಗೋಡೆಗೆ ಸಣ್ಣ ಅಕ್ಷರದಲ್ಲಿ ಇಂದಿರಾ ಕ್ಯಾಂಟೀನ್ ಎಂದು ಬರೆಯಲಾಗಿದೆ.

ವಿವಿಧ ಹಳ್ಳಿಗಳಿಂದ ಬರುವ ಸಾರ್ವಜನಿಕರಿಗೆ ಇಲ್ಲಿ ಇಂದಿರಾ ಕ್ಯಾಂಟೀನ್ ಎಲ್ಲಿದೆ ಎನ್ನುವುದೇ ಸಿಗುವುದಿಲ್ಲ. ಅವರು ಸ್ಥಳೀಯರ ಬಳಿ ಕೇಳಿ ಮಾಹಿತಿ ಪಡೆದು ಕ್ಯಾಂಟೀನ್ ವಿಳಾಸ ಹುಡುಕುವುದು ಅನಿವಾರ್ಯ.

ಇಂದಿರಾ ಕ್ಯಾಂಟೀನ್ ಬೋರ್ಡ್ ಮತ್ತೆ ಎದ್ದು ನಿಲ್ಲುವ ಭಾಗ್ಯ ಇನ್ನೂ ಸಿಕ್ಕಿಲ್ಲ. ಪುರಸಭೆ ಅಧಿಕಾರಿಗಳು, ಜನಪ್ರತಿನಿಧಿಗಳು ಈ ಬಗ್ಗೆ ಗಮನಹ-ರಿಸಿಲ್ಲ. ಪ್ರಶ್ನಿಸಿದರೆ ಅಧಿಕಾರಿಗಳು ಕುಂಟು ನೆಪ ಹೇಳುತ್ತಾರೆ ಎನ್ನುತ್ತಾರೆ ಸಾರ್ವಜನಿಕರು.




ಕ್ಯಾಂಟಿನ್ ಒಳಗಡೆ ಗೋಡೆಗೆ ಇಂದಿರಾ ಗಾಂಧಿ ಫೋಟೋ ಹಾಗೂ ಮೆನು ಇದೆ. ಆದಷ್ಟು ಬೇಗನೆ ಬೋರ್ಡ್ ಹಾಕಿಸುವ ಕೆಲಸ ಮಾಡುತ್ತೇನೆ.

**-ಆರ್.ಬಸನಗೌಡ ತುರವಿಹಾಳ,** ಶಾಸಕರು, ಮಸ್ಕಿ ವಿಧಾನಸಭಾ ಕ್ಷೇತ್ರ.

ಇಂದಿರಾ ಕ್ಯಾಂಟೀನ್ ನ ನಾಮಫಲಕ ಜಿಲ್ಲಾಧಿಕಾರಿ ಕಾರ್ಯಾಲಯದಿಂದ ಅಳವಸಲಾಗುತ್ತಿದ್ದು, ಇದರ ಬಗ್ಗೆ ನಮ್ಮ ಸಿಬ್ಬಂದಿಯನ್ನು ಕಳಿಸಿ ನಾಮಫಲಕ ಹಾಕಿಸಲು ಕ್ರಮ ತೆಗೆದುಕೊಳ್ಳಲಾಗುವುದು.

**-ನರಸರೆಡ್ಡಿ,** ಮುಖ್ಯಾಧಿಕಾರಿಗಳು, ಪುರಸಭೆ ಮಸ್ಕಿ.

## ಈಜಾಡಲು ಹೋಗಿ ಪ್ರಾಣ ಕಳೆದುಕೊಂಡ ಯುವಕ



ಜನವಾದಿ ವಾರ್ತೆ

ಮುದಗಲ್ ಫೆ 21- ಪಟ್ಟಣ ಸಮೀಪದ ಖೈರವಾಡಗಿ ಗ್ರಾಮದ ಇ ಕೆರೆಯಯಲ್ಲಿ ಈಜಾಡಲು ಹೋಗಿ ಯುವಕ ಪ್ರಾಣ ಕಳೆದುಕೊಂಡಿರುವ ಘಟನೆ ಶನಿವಾರ ನೆಡೆದಿದೆ.

ಸುಮಾರು 15ಜನ ಸ್ನೇಹಿತರು ಸೇರಿ ಈಜಾಡಲು ಹೋಗಿ ದಡನ್ನು ಮುಟ್ಟಲು ವಿಫಲವಾಗಿ ಪ್ರಾಣವನ್ನು ಕಳೆದುಕೊಂಡ ಪರಶುರಾಮ ಗುಂಡಪ್ಪ ಅಕ್ಕಿ (20ವರ್ಷ) ಯುವಕ ಸಾವಿರಾರು ಸಂಖ್ಯೆಯಲ್ಲಿ ಗ್ರಾಮಸ್ಥರು ಹಾಗೂ ಅಗ್ನಿಶಾಮಕ ಇಲಾಖೆ ಹಾಗೂ ಮುದಗಲ್ ಆರಕ್ಷಕ ಠಾಣೆಯ ಪಿಎಸ್‌ಐ ವೆಂಕಟೇಶ್ ಸೇರಿ ಮೃತದೇಹ ಹುಡುಕಲು ಕಾರ್ಯಾಚಾರಣೆ ನಡೆಸಿದ್ದಾರೆ ಆದರೂ ಸುಮಾರು ಗಂಟೆಗಳು ಕಳೆದರು ಮೃತ ದೇಹ ಸಿಕ್ಕಿಲ್ಲ.

ಈ ಕೆರೆಗೆ ಸರ್ಕಾರ ಯಾವುದೆ ತರಹ ಕಾವಲುಗಾರ ಇಲ್ಲ ಬ್ಯಾರಿಕೆಡ್ ವೆವಸ್ಥೆ ಹಾಕಿಲ್ಲ ಇನ್ನು ಅವ್ಯವಸ್ತ ವಾದ ಕೆರೆ ನಿರ್ಮಾಣ ವಾಗಿರುವುದ-ರಿಂದ ಯುವಕನ ಪ್ರಾಣ ಬಲಿ ತೆಗೆದುಕೊಂಡಿದೆ ಎಂದು ಖೈರವಾಡಗಿ ಗ್ರಾಮಸ್ಥರು ಆರೋಪಿಸಿದರು.

## ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ತರಬೇತಿ ಕೇಂದ್ರಕ್ಕೆ ಶಂಕುಸ್ಥಾಪನೆ ನೆರವೇರಿಸಿದ ಸಚಿವ ಎನ್.ಎಸ್.ಬೋಸರಾಜು




ಜನವಾದಿ ವಾರ್ತೆ

ಮಾನ್ವಿ ಫೆ 21- ಪಟ್ಟಣದಲ್ಲಿ ಶುಕ್ರವಾರ ವಿವಿಧ ಅಭಿವೃದ್ಧಿ ಕಾಮಗಾ-ರಿಗಳಿಗೆ ರಾಜ್ಯ ಸಣ್ಣ ನೀರಾವರಿ ಹಾಗೂ ವಿಜ್ಞಾನ ತಂತ್ರಜ್ಞಾನ ಸಚಿವರಾದ ಎನ್.ಎಸ್.ಬೋಸರಾಜು ಶಂಕುಸ್ಥಾಪನೆ ನೆರವೇರಿಸಿ ಕಾಮಗಾರಿಗಳಿಗೆ ಚಾಲನೆ ನೀಡಿ ಮಾತನಾಡಿ ಪಟ್ಟಣದ ಜನತಾ ಹೌಸಿಂಗ್ ಕಾಲೋನಿಯಲ್ಲಿ ಕೆ.ಕೆ.ಆರ್.ಡಿ.ಬಿ. ಅನುದಾಡಿಯಲ್ಲಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ವಿದ್ಯಾರ್ಥಿಗಳಿಗೆ ತರಬೇತಿ ಕೇಂದ್ರದ ಕಟ್ಟಡವನ್ನು ನಿರ್ಮಿತಿ ಕೇಂದ್ರದಿಂದ ನಿರ್ಮಿಸಲಾಗುತ್ತಿದು ಈ ತರಬೇತಿ ಕೇಂದ್ರದಿಂದ ತಾಲೂಕಿನ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ವಿದ್ಯಾರ್ಥಿಗಳಿಗೆ ಹಾಗೂ ಶಿಕ್ಷಕರಿಗೆ ಉತ್ತಮ ತರಬೇತಿಯನ್ನು ನೀಡುವುದಕ್ಕೆ ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಸಂಸದ ಜಿ.ಕುಮಾರನಾಯಕ, ಶಾಸಕ ಹಂಪಯ್ಯನಾಯಕ, ತಾ. ಕ್ಷೇತ್ರ ಶಿಕ್ಷಣಾಧಿಕಾರಿ ಚಂದ್ರಶೇಖರ.ಡಿ, ಗ್ಯಾರಂಟಿ ಸಮಿತಿ ತಾ.ಅಧ್ಯಕ್ಷರಾದ ಬಿ.ಕೆ.ಅಂಬರೇಶಪ್ಪ, ಭೂದಾನಿಗಳಾದ ರವಿಬಾಬು,ತಾ. ಸರ್ಕಾರಿ ನೌಕರರ ಸಂಘದ ಅಧ್ಯಕ್ಷರಾದ ಸುರೇಶ ಕುರ್ಡಿ, ತಾ.ಪ್ರಥಮಿಕ ಶಾಲಾ ಶಿಕ್ಷಕರ ಸಂಘದ ತಾ.ಅಧ್ಯಕ್ಷರಾದ ಸಂಗಮೇಶ ಮುಧೋಳ್, ಹಂಪಣ್ಣ ಚಂಡೂರು,ತಾ.ನಿವೃತ್ತ ನೌಕರರ ಸಂಘದ ಅಧ್ಯಕ್ಷರಾದ ರೇವಣಸಿದ್ದಯ್ಯಸ್ವಾಮಿ, ಸೇರಿದಂತೆ ತಾ. ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ಭಾಗವಹಿಸಿದರು.

## 14 ಹಳ್ಳಿಗಳ ಫಲಾನುಭವಿಗಳಿಗೆ ಮೋಟಾರ್ ಪಂಪು ವಿತರಿಸಿದ ಸಚಿವ ಎನ್‌ಎಸ್ ಬೋಸರಾಜು

ಜನವಾದಿ ವಾರ್ತೆ



ರಾಯಚೂರು ಫೆ 21- ಸಣ್ಣ ಭೂ ಹಿಡುವಳಿದಾರರ ಕೃಷಿಗೆ ಅನುಕೂಲ ಕಲ್ಪಿಸಿ, ಕೃಷಿ ಚಟುವಟಿಕೆಗಳಿಂದ ರೈತರ ಆರ್ಥಿಕ ಸಮತೋಲನೆಗಾಗಿ ನನ್ನ ಜವಾಬ್ದಾರಿಯ ಸಣ್ಣ ನೀರಾವರಿ ಹಾಗೂ ಅಂತರ್ಜಲ ಇಲಾಖೆಯಿಂದ ಎಸ್ ಸಿಪಿ ಮತ್ತು ಟಿಎಸ್‌ಪಿ ಯೋಜನೆಯಡಿ ಬಡ ರೈತರನ್ನು ಗುರುತಿಸಿ ಕೊಳವೆ ಬಾವಿ ಕೊರೆಸಿ ನೀರಾವರಿ ಸೌಲಭ್ಯಕ್ಕೆ ಅನುಕೂಲ ಕಲ್ಪಿಸಲು ಫಲಾನುಭವಿಗಳಿಗೆ ಮೋಟಾರ್ ಪಂಪ್ ಗಳನ್ನು ವಿತರಿಸಲಾಗುತ್ತಿದೆ. ರೈತರು ಕೃಷಿ ಚಟುವಟಿಕೆಗಳಿಗೆ ಕೊಳವೆ ಬಾವಿಗಳನ್ನು ಉಪಯೋಗಿಸಿಕೊಳ್ಳಬೇಕು. ನಾನು ಸಣ್ಣ ನೀರಾವರಿ ಇಲಾಖೆಯ ಸಚಿವನಾಗಿ ಜವಾಬ್ದಾರಿ ವಹಿಸಿದ ದಿನದಿಂದಲೂ ಅಂತರ್ಜಲ ವೃದ್ಧಿಯೊಂದಿಗೆ ರೈತರ ಹಿತ ಕಾಪಾಡಲು ಪ್ರಾಮಾಣಿಕವಾಗಿ ಪ್ರಯತ್ನಿಸುತ್ತಿದ್ದೇನೆ ಎಂದು ಸಣ್ಣ ನೀರಾವರಿ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಸಚಿವರಾದ ಎನ್‌ಎಸ್ ಬೋಸರಾಜು ಅವರು ತಿಳಿಸಿದರು.

ರಾಯಚೂರು ನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಗ್ರಾಮೀಣ ಭಾಗದ14 ಹಳ್ಳಿಗಳಲ್ಲಿ ಆಯ್ಕೆಯಾದ ಫಲಾನುಭವಿಗಳಿಗೆ ಬೋಳಮಾನ ದೊಡ್ಡಿ ಶ್ರೀ ತಿಮ್ಮಪ್ಪ ದೇವಸ್ಥಾನದ ಬಳಿ ಮೋಟಾರ್ ಪಂಪ್‌ಗಳನ್ನು ರಾಯಚೂರು ಲೋಕಸಭಾ ಕ್ಷೇತ್ರದ ಸಂಸದರಾದ ಜಿ ಕುಮಾರ ನಾಯಕ ಅವರೊಂದಿಗೆ ಸಚಿವ ಎನ್‌ಎಸ್ ಬೋಸರಾತು ಅವರು ವಿತರಣೆ ಮಾಡಿ ಮಾತನಾಡಿದರು.

ಕಳೆದ ಎರಡುವರೆ ವರ್ಷದಿಂದ ರಾಜ್ಯದಾದ್ಯಂತ ಅಂತರ್ಜಲ ಮಟ್ಟ ವೃದ್ಧಿಗೊಳಿಸಲು ನೀರು ಹರಿಯುವ ಪ್ರದೇಶಗಳಲ್ಲಿ ಚಕ್ ಡ್ಯಾಮ್, ಕೆರೆಗಳ ನಿರ್ಮಾಣ, ಬಿಡ್ಜ್ ಕಮ್ ಬ್ಯಾರೇಜ್ ನಿರ್ಮಿಸುವ ಮೂಲಕ ಅಂತರ್ಜಲ ಮಟ್ಟ ಹೆಚ್ಚಳಕ್ಕೆ ವೈಜ್ಞಾನಿಕವಾಗಿ ಯೋಜನೆಗಳನ್ನು ರೂಪಿಸಿದ್ದೇವೆ. ಅತಿ ಹೆಚ್ಚು ಅಂತರ್ಜಲ ಉಪಯೋಗ ಮಾಡುವುದರಲ್ಲಿ ರಾಷ್ಟದಲ್ಲಿಯೇ ನಾವು 9 ನೇ ಸ್ಥಾನದಲ್ಲಿದ್ದೆವು ನಮ್ಮ ಇಲಾಖೆಯ ವೈಜ್ಞಾನಿಕ ಯೋಜನೆಗಳ ಅನುಷ್ಠಾನದಿಂದ ಪ್ರಸ್ತುತ 2% ಅಂತರ್ಜಲ ಹೆಚ್ಚಾಗಿದೆ ಎಂದು ತಿಳಿಸಿದರು.

ಮಾರುಕಟ್ಟೆಯಲ್ಲಿ ಸಾವಿರಾರು ರೂಪಾಯಿ ಸುರಿದು ಪಂಪ್, ಮೋಟಾರ್ ಮತ್ತು ಪೈಪ್‌ಗಳನ್ನು ಕೊಂಡುಕೊಳ್ಳಲಾಗದ ಬಡ ರೈತರನ್ನು ಗುರುತಿಸಿ ನಮ್ಮ ಇಲಾಖೆಯಿಂದ ಎಸ್ ಸಿ ಮತ್ತು ಎಸ್ ಟಿ ರೈತರಿಗೆ ಉಚಿತವಾಗಿ ಪಂಪ್, ಮೋಟಾರ್ ಸೆಟ್ ನೀಡುವುದಲ್ಲದೆ ಉಚಿತವಾಗಿ ವಿದ್ಯುತ್ ನೀಡಲಾಗುತ್ತಿದೆ. ಅರ್ಹ ಫಲಾನುಭವಿಗಳಿಗೆ ಉಚಿತ ಪಂಪ್‌ಸೆಟ್ ಹಾಗೂ ಪರಿಕರಗಳನ್ನು ನೀಡುತ್ತಿದ್ದು, ರೈತರು ಸದುಪಯೋಗಪಡಿಸಿ ಕೊಳ್ಳುವಂತೆ ಹೇಳಿದರು.

ಕೊಳವೆ ಬಾವಿ ಮೂಲಕ ಸಣ್ಣ ಭೂ ಹಿಳುವಳಿದಾರರು ಹನಿ ನೀರಾವರಿ, ತುಂತುರು ನೀರಾವರಿಯಂತಹ ಬೇಸಾಯದೊಂದಿಗೆ ಮಿಶ್ರ ಕೃಷಿ ಪದ್ಧತಿಯನ್ನು ಪ್ರಯತ್ನಿಸಬೇಕು. ಮಿಶ್ರ ಬೆಳೆ ಬಿತ್ತನೆಯಿಂದ ರೈತರಿಗೆ ಲಾಭವಾಗಲಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಕಾಂಗ್ರೆಸ್ ಮುಖಂಡರಾದ ಮೊಹಮ್ಮದ್ ಶಾಲಂ, ಜಯಣ್ಣ, ನರಸಿಂಹಲು ಮಾದಗಿರಿ ಕುರುಬ ದೊಡ್ಡಿ ಆಂಜನೇಯ, ಜಿ ಶಿವಮೂರ್ತಿ, ಅಮರೇಗೌಡ ಹಂಚಿನಾಳ ತಾಯಣ್ಣ, ಬಿ ರಮೇಶ್, ಮಹಾದೇವ್, ತಿಮ್ಮಪ್ಪ, ಹನುಮಂತ, ಗೋವಿಂದಪ್ಪ ಸೇರಿ ಅನೇಕರಿದ್ದರು.

## ಪಾರದರ್ಶಕವಾಗಿ ನಡೆಯಲಿ: ಅಪರ ಜಿಲ್ಲಾಧಿಕಾರಿ ಶಿವಾನಂದ

ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು.

ಈ ವೇಳೆ ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಕುಮಾರಸ್ವಾಮಿ ಅವರು ಮಾತನಾಡಿ, ಪರೀಕ್ಷಾ ದಿನದಂದು ಪರೀಕ್ಷಾ ಕೇಂದ್ರದ ಸುತ್ತಲಿನ 200 ಮೀಟರ್ ವ್ಯಾಪ್ತಿಯಲ್ಲಿ ಪ್ರತಿಬಂಧಕ ಜಾರಿಗೊಳಿಸಲಾಗುತ್ತದೆ. ಹಾಗೆಯೇ ಪರೀಕ್ಷಾ ದಿನಗಳಂದು ಜೆರಾಕ್ಸ್ ಅಂಗಡಿಗಳನ್ನು ಸಹ ಮುಚ್ಚಿಸಲಾಗುತ್ತದೆ ಎಂದರು.

ಈ ವೇಳೆ ಪದವಿ ಪೂರ್ವ ಕಾಲೇಜು ಶಿಕ್ಷಣ ಇಲಾಖೆಯ ಉಪ ನಿರ್ದೇಶಕರಾದ ಸೋಮುಶೇಖರಪ್ಪ ಹೋಕ್ರಾಣಿ ಅವರು ಮಾತನಾಡಿ, ಜಿಲ್ಲೆಯಲ್ಲಿ ಈ ಬಾರಿ 22,442 ವಿದ್ಯಾರ್ಥಿಗಳು ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆ ಬರೆಯಲಿದ್ದು, ಮೊದಲ ಬಾರಿಗೆ 18,419 ವಿದ್ಯಾರ್ಥಿಗಳು ಪರೀಕ್ಷೆ ಬರೆಯುತ್ತಿದ್ದಾರೆ. 560 ಖಾಸಗಿಯಾಗಿ ಹಾಗೂ 3,450 ಪುನರಾವರ್ತಿತ ವಿದ್ಯಾರ್ಥಿಗಳು ಪರೀಕ್ಷೆ ಬರೆಯಲಿದ್ದು, ಜಿಲ್ಲೆಯ 43 ಕೇಂದ್ರಗಳಲ್ಲಿ ದ್ವಿತೀಯ ಪಿಯು ಪರೀಕ್ಷೆ ನಡೆಯಲಿದೆ ಎಂದರು. ಪರೀಕ್ಷೆ ಕೇಂದ್ರಗಳು: ರಾಯಚೂರು ತಾಲೂಕಿನಲ್ಲಿ 13, ಲಿಂಗಸುಗೂರು 07, ದೇವದುರ್ಗ 05, ಸಿಂಧನೂರು 09, ಮಾನವಿ 05, ಮಸ್ಕಿ 02, ಸಿರವಾರ 02 ಸೇರಿದಂತೆ ಒಟ್ಟು 43 ಪರೀಕ್ಷೆ ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿದೆ. ಇದೇ ಸಂದರ್ಭದಲ್ಲಿ ಜಿಲ್ಲೆಯ ವಿವಿಧ ತಾಲೂಕಿನ ತಹಶಿಲ್ದಾರರು, ಕ್ಷೇತ್ರ ಶಿಕ್ಷಣಾಧಿಕಾರಿಗಳು, ವಿವಿಧ ಕಾಲೇಜಿನ ಪ್ರಾಂಶುಪಾಲರು, ಹಿರಿಯ ಉಪನ್ಯಾಸಕರು ಹಾಗೂ ಪದವಿ ಪೂರ್ವ ಶಿಕ್ಷಣ ಇಲಾಖೆಯ ವಿವಿಧ ಅಧಿಕಾರಿಗಳು, ಸಿಬ್ಬಂದಿ ಸಭೆಯಲ್ಲಿ ಇದ್ದರು.

## ಭತ್ಯೆ ನೀಡಲಿ - ಮಹೇಂದ್ರ ಕುಮಾರ ಮಿತ್ರ

ಪದವೀಧರರಿಗೆ 20 ಸಾವಿರ ಹಾಗೂ ಸ್ನಾತಕೋತ್ತರ ನಿರುದ್ಯೋಗಿಗಳಿಗೆ 25 ಸಾವಿರ ಭತ್ಯೆ ನೀಡುವಂತೆ ಸರ್ಕಾರ ಕ್ರಮ ಕೈಗೊಳ್ಳಬೇಕು ಎಂದು ಹೇಳಿದರು.

ಚುನಾವಣಾ ಘೋಷಣೆಯಂತೆ 200 ಯೂನಿಟ್ ಉಚಿತ ವಿದ್ಯುತ್ ನೀಡುವುದಾಗಿ ಸರ್ಕಾರ ಜಾಹೀರಾತು ನೀಡಿದ್ದರೂ, ವಾಸ್ತವದಲ್ಲಿ ಜನರಿಂದ ಹಣ ವಸೂಲಿ ಮಾಡಲಾಗುತ್ತಿದೆ ಎಂದು ಟೀಕಿಸಿದರು. ಸಾರ್ವಜನಿಕರು ಜೆಸ್ಕಾಂ ಕಚೇರಿಗೆ ಭೇಟಿ ನೀಡಿ ಉಚಿತ ವಿದ್ಯುತ್ ಪ್ರಮಾಣ ಪರಿಶೀಲಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಮೀಸಲು ಪ್ರಮಾಣ ಹೆಚ್ಚಿಸಿರುವ ವಿಷಯ ಹೈಕೋರ್ಟ್‌ನಲ್ಲಿ ಪ್ರಶ್ನೆಯಾಗಿದ್ದು, ಶೇ.56 ಮೀಸಲಾತಿಯನ್ನು ಶೇ.50 ಮಿತಿಯೊಳಗೆ ನೇಮಕಾತಿ ನಡೆಸುವಂತೆ ನ್ಯಾಯಾಲಯ ಸೂಚಿಸಿದೆ. ಎಸ್ಸಿ/ಎಸ್ಟಿ ಸಮುದಾಯಗಳಿಗೆ ಮೀಸಲಾತಿಯನ್ನು ಎಬಿಸಿ ಗುಂಪುಗಳಿಗೆ ಮರು ವಿಂಗಡನೆ ಮಾಡುವಲ್ಲಿ ಸರ್ಕಾರ ಮುಂದಾಗಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

2020ರಲ್ಲಿ ರಾಜ್ಯ ಸರ್ಕಾರ 'ದಲಿತ' ಪದ ಬಳಕೆ ಮಾಡಬಾರದೆಂದು ಸುತ್ತೋಲೆ ಹೊರಡಿಸಿದ್ದರೂ, ಇಂದಿಗೂ ಪದ ಬಳಕೆ ಮುಂದುವರಿದಿದೆ. ಈ ಸಂಬಂಧ ಕಲಬುರಗಿ ಹೈಕೋರ್ಟ್‌ನಲ್ಲಿ ರಿಟ್ ಅರ್ಜಿ ಸಲ್ಲಿಕೆಯಾಗಿದ್ದು, ಆದೇಶ ಪಾಲಿಸದಿದ್ದರೆ ಕಾನೂನು ಕ್ರಮ ಜರುಗಿಸುವಂತೆ ನ್ಯಾಯಮೂರ್ತಿಗಳು ಸೂಚಿಸಿದ್ದಾರೆ ಎಂದು ಹೇಳಿದರು. ಸಂಘಟನೆಗಳು 'ದಲಿತ' ಪದ ಬಳಕೆ ಮಾಡಿದರೆ ಪ್ರಕರಣ ದಾಖಲಿಸುವ ಎಚ್ಚರಿಕೆ ನೀಡಿದರು.

ಈ ವೇಳೆ ಡಾ. ಬಿ.ಆರ್. ಅಂಬೇಡ್ಕರ್ ಪೀಪಲ್ಸ್ ಪಾರ್ಟಿ ಕಾರ್ಯಾಧ್ಯಕ್ಷರಾಗಿ ನೇಮಕಗೊಂಡಿರುವುದಾಗಿ ತಿಳಿಸಿದರು. ಈ ಸಂದರ್ಭದಲ್ಲಿ ನರಸಿಂಹಲು ಉಪಸ್ಥಿತರಿದ್ದರು.

## ಪಿಎಸ್‌ಐ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು ಆಗ್ರಹ

ಪ್ರಕರಣದಲ್ಲಿ ಆರೋಪಿತರಲ್ಲಿ ಒಬ್ಬರಾಗಿರುವ ರೈಲ್ವೆ ಇಲಾಖೆಯ ರಾಘವೇಂದ್ರ ಮನೆಗೆ ಬಂದು ಗಲಾಟೆ ನಡೆಸಿದ ವೇಳೆ ವಿಡಿಯೋ ಮಾಡಲು ಮುಂದಾದ ಸಕ್ಕುಬಾಯಿ ಮೇಲೆ ಹಲ್ಲೆ ನಡೆಸಿ ಮೊಬೈಲ್ ಕಸಿದುಕೊಂಡಿರುವುದಾಗಿ ಹೇಳಿದರು. ಪತಿಯಾದ ರಾಮಣ್ಣ ರಕ್ಷಣೆಗೆ ಬಂದಾಗ ಪೊಲೀಸರು ಆರೋಪಿಗಳ ಪರ ನಿಂತು ವಿಡಿಯೋಗಳನ್ನು ತಿರುಚಿ ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಟ್ಟು, ಪೊಲೀಸರ ಮೇಲೆ ಹಲ್ಲೆ ನಡೆಸಿದರೆಂದು ಸುಳ್ಳು ಪ್ರಕರಣ ದಾಖಲಿಸಲಾಗಿದೆ ಎಂದು ಆರೋಪಿಸಿದರು. ನಮ್ಮನ್ನು ರಕ್ಷಿಸಬೇಕಾದ ಪೊಲೀಸರೇ ಆರೋಪಿಗಳನ್ನು ಮನೆ ಸಮೀಪ ಕರೆತಂದು ಗೊಂದಲ ಸೃಷ್ಟಿಸಿದ್ದು, ಆತ್ಮರಕ್ಷಣೆಗಾಗಿ ಮಾಡಿದ ಪ್ರಯತ್ನವನ್ನೇ ತಪ್ಪಾಗಿ ಬಿಂಬಿಸಿ ಅಪರಾಧಿಗಳನ್ನಾಗಿ ಮಾಡಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಪ್ರಕರಣದ ಪರಿಣಾಮವಾಗಿ ಕುಟುಂಬವು ಮೂರು ತಿಂಗಳು ಜೈಲು ವಾಸ ಹಾಗೂ ತಿಂಗಳುಗಟ್ಟಲೆ ಆಸ್ಪತ್ರೆ ವಾಸ ಅನುಭವಿಸಬೇಕಾಗಿ ಬಂದಿದ್ದು, ಕುಟುಂಬದ ಆರ್ಥಿಕ ಹಾಗೂ ಮಾನಸಿಕ ಸ್ಥಿತಿ ಹದಗೆಟ್ಟಿದೆ. ಮಕ್ಕಳ ಭವಿಷ್ಯಕ್ಕೂ ಇದರಿಂದ ತೊಂದರೆ ಉಂಟಾಗಿದೆ ಎಂದು ಅವರು ವಿಷಾದಿಸಿದರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಸಮಗ್ರ ತನಿಖೆ ನಡೆಸಿ, 11 ಮಂದಿ ಆರೋಪಿಗಳು ಹಾಗೂ ಅವರಿಗೆ ಕುಮ್ಮಕ್ಕು ನೀಡಿದ ಪಿಎಸ್‌ಐ ವೆಂಕಟೇಶ್ ಮಾಡಗಿರಿ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು. ಈಗಾಗಲೇ ಮಹಿಳಾ ಆಯೋಗ, ಐಜಿ ಹಾಗೂ ಡಿಐಜಿ ಸೇರಿದಂತೆ ಹಿರಿಯ ಅಧಿಕಾರಿಗಳಿಗೆ ದೂರು ಸಲ್ಲಿಸಿರುವುದಾಗಿ ತಿಳಿಸಿದರು. ಪತ್ರಿಕಾಗೋಷ್ಠಿಯಲ್ಲಿ ಸಂತ್ರಸ್ತೆಯ ಪತಿ ರಾಮಪ್ಪ, ಲಾಲಮ್ಮ ಹಾಗೂ ಶಿಲ್ಪಾ ಉಪಸ್ಥಿತರಿದ್ದರು.

## ಕರೆಗುಡ್ಡ ಗ್ರಾಮದಲ್ಲಿ ನೂತನ ಸಮುದಾಯ ಭವನ ನಿರ್ಮಾಣ ಕಾಮಗಾರಿಗೆ ಸಚಿವರಿಂದ ಚಾಲನೆ

ಜನವಾದಿ ವಾರ್ತೆ



ಮಾನ್ವಿ ಫೆ 21- ತಾಲೂಕಿನ ಕರೆಗುಡ್ಡ ಗ್ರಾಮದಲ್ಲಿ ಶ್ರೀ ಮಹಾಂತೇಶ್ವರ ಮಠದ ಅವರಣದಲ್ಲಿ ನೂತನ ಸಮುದಾಯ ಭವನ ನಿರ್ಮಾಣ ಕಾಮಗಾರಿಗೆ ರಾಜ್ಯ ಸಣ್ಣ ನೀರಾವರಿ ಹಾಗೂ ವಿಜ್ಞಾನ ತಂತ್ರಜ್ಞಾನ ಸಚಿವರಾದ ಎನ್.ಎಸ್.ಬೋಸರಾಜು ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿ ಗ್ರಾಮದ ಜನರಿಗೆ ಹಾಗೂ ಗ್ರಾಮದಲ್ಲಿನ ಶ್ರೀ ಮಹಾಂತೇಶ್ವರ ಮಠದ ವಿವಿಧ ಕಾರ್ಯಕ್ರಮಗಳಿಗೆ ಅನುಕೂಲವಾಗುವಂತೆ ಶಾಸಕರ,ಸಂಸದರ ,ವಿಧಾನಪರೀಷತ್ ಸದಸ್ಯರ ನೀದಿಯಡಿಯಲ್ಲಿ ಒಟ್ಟು 40 ಲಕ್ಷ ವೆಚ್ಚದಲ್ಲಿ ಸುಸಜ್ಜಿತವಾದ ಸಮುದಾಯಭವನವನ್ನು ನಿರ್ಮಾಣ ಕಾಮಗಾರಿಗೆ ಇಂದು ಚಾಲನೆ ನೀಡಲಾಗುತ್ತಿದ್ದು ಅಧಿಕಾರಿಗಳು ಗುಣಮಟ್ಟದ ಕಾಮಗಾರಿಗೆ ಹೆಚ್ಚಿನ ಅದ್ಯತೆಯುನ್ನು ನೀಡುವಂತೆ ಸೂಚಿಸಿದರು.

ಶ್ರೀ ಮಹಾಂತೇಶ್ವರ ಮಠದ ಶ್ರೀ ಮಹಾಂತಲಿಂಗ ಮಹಾಸ್ವಾಮಿಗಳು.

ರಾಯುಚೂರು ಸಂಸದ ಜಿ.ಕುಮಾರ್ ನಾಯಕ್, ಶಾಸಕ ಜಿ ಹಂಪಯ್ಯ ನಾಯಕ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಅಬ್ದುಲ್ ಗಫೂರ್ ಸಾಬ್, ತಾ. ಗ್ಯಾರಂಟಿ ಸಮಿತಿ ಅಧ್ಯಕ್ಷರಾದ ಬಿ.ಕೆ. ಅಂಬರೇಶಪ್ಪ ವಕೀಲರು ಮುಖಂಡರಾದ ರೌಡೂರು ಮಹಾಂತೇಶ್ ಸ್ವಾಮಿ, ರಾಜಾ ಸುಭಾಷ್ ಚಂದ್ರ ನಾಯಕ, ರಾಜಶೇಖರ್ ಪಾಟೀಲ್ ಜಾನೇಕಲ್, ಮಹೇಶ್ ಗೌಡ ಗವಿಗಟ್,ಅಂಬಣ್ಣ ಪಾಟೀಲ್, ಬಸವಲಿಂಗಪ್ಪಗೌಡ, ಚನಬಸವ ನಾಯಕ,ದೊಡ್ಡಬಸಪ್ಪ,ಅಂಬರೀಶ್ ಕುರುಬರ, ಪರ್ವತ ರೆಡ್ಡಿ, ಬ್ಯಾಗವಾಟ್ ವೆಂಕನಗೌಡ, ಬ್ಯಾಗವಾಟ್ ಯಲ್ಲಪ್ಪ,ಬಳ್ಳಾರಿ ಶಿವಕುಮಾರ್ ಮಾನ್ವಿ,ಹನುಮಂತಪ್ಪ ಗೌಡ ಪೊಲೀಸ್ ಪಾಟೀಲ್ ನಕ್ಕುಂದಿ, ಸೇರಿದಂತೆ ಗ್ರಾಮದ ಮುಖಂಡರು ಭಾಗವಹಿಸಿದರು.

## ವಿದ್ಯಾರ್ಥಿಗಳು ಸತತ ಪ್ರಯತ್ನದಿಂದ ಮಾತ್ರ ಉನ್ನತ ಸಾಧನೆ ಸಾಧ್ಯ: ತಾಯಪ್ಪ .ಬಿ.ಹೊಸೂರ

ಜನವಾದಿ ವಾರ್ತೆ




ಮಾನ್ವಿ ಫೆ 21- ಪಟ್ಟಣದ ಬಾಲಕಿಯರ ಸರಕಾರಿ ಪದವಿ ಪೂರ್ವ ಕಾಲೇಜಿನ ಆವರಣದಲ್ಲಿ ನಡೆದ ಬೀಳ್ಕೊಡುಗೆ ಹಾಗೂ ಸರಸ್ವತಿ ಪೂಜೆ ಕಾರ್ಯಕ್ರಮವನ್ನು ಉದ್ಘಾಟಿಸಿ ಜಿಲ್ಲಾ ಕ.ಸಾಪ. ಗೌರವ ಕಾರ್ಯದರ್ಶಿ ತಾಯಪ್ಪ ಬಿ ಹೊಸೂರ ಮಾತನಾಡಿ ವಿದ್ಯಾರ್ಥಿಗಳು ಸತತ ಪ್ರಯತ್ನ ಹಾಗೂ ನಿರಂತರ ಅಭ್ಯಾಸದಿಂದ ಮಾತ್ರ ಜೀವನದಲ್ಲಿ ಉನ್ನತ ಸಾಧನೆಯನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆ ಹಾಗೂ ಪ್ರತಿಯೊಬ್ಬರು ಕೂಡ ಶಿಕ್ಷಣದ ಜೋತೆಗೆ ಮಾನವಿಯ ಮೌಲ್ಯಗಳನ್ನು ಬೆಳೆಸಿಕೊಳ್ಳಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಶ್ರೀ ಪಂಪ ವಿರೂಪಾಕ್ಷೇಶ್ವರ ಸೌಹಾರ್ದ ಸಹಕಾರಿ ಬ್ಯಾಂಕಿನ ಸಿ.ಇ.ಓ. ಶಂಕರನಂದ ಮಾತನಾಡಿ ವಿದ್ಯಾರ್ಥಿಗಳು ವೃತ್ತಿಪರ ಶಿಕ್ಷಣದ ಬಗ್ಗೆ ಹೆಚ್ಚಿನ ಆಸಕಿಯನ್ನು ವಹಿಸಿದಾಗ ಮಾತ್ರ ಜೀವನದಲ್ಲಿ ಸಾಧನೆಯನ್ನು ಮಾಡುವುದಕ್ಕೆ ಸಾಧ್ಯ ಎಂದು ತಿಳಿಸಿದರು.

ಕಾಲೇಜಿನ ಪ್ರಾಚಾರ್ಯರಾದ ನಾಗಮಲ್ಲೇಶ್ ಜಿ. ಶಿಕ್ಷಣ ಪ್ರೇಮಿ ರಹಿಮ್ ಸಾಬ್, ಬಾಲಕಿಯರ ಪ್ರೌಢಶಾಲೆಯ ಉಪ ಪ್ರಾಂಶುಪಾಲರಾದ ಸುಧಾಕರ್ ಸಂಜೀವ್, ಉಪನ್ಯಾಸಕರಾದ ಕೆ ವಿ ರಾಮಕೃಷ್ಣ ,ಅನುಪಮ, ಅನ್ನಪೂರ್ಣ ಪಾಟೀಲ್ ಇದ್ದರು.

Printed by , Published by, Owned by : basavaraj H , Printed and Published at Basavashree Printers and Publishers, H.No.1-11-54/32, Prashanth Colony, RAICHUR-584101. Editor. BASAVARAJ H